# ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975

## ಪ್ರಕರಣಗಳ ಅನುಕ್ರಮಣಿಕೆ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

**ಅಧ್ಯಾಯ-I**
**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ

**ಅಧ್ಯಾಯ-II**
**ಪರಿಭಾಷೆಗಳು**

2. ಪರಿಭಾಷೆಗಳು

**ಅಧ್ಯಾಯ-III**
**ಭಿಕ್ಷೆ ಬೇಡುವುದರ ನಿಷೇಧ**

3. ಭಿಕ್ಷೆ ಬೇಡುವುದನ್ನು ನಿಷೇಧಿಸಿದೆ

**ಅಧ್ಯಾಯ-IV**
**ರಚನೆ ಮತ್ತು ಆಡಳಿತ**

4. ಕೇಂದ್ರ ಪರಿಹಾರ ಸಮಿತಿ
5. ಸ್ಥಳೀಯ ಸಮಿತಿಗಳು
6. ಸ್ಥಳೀಯ ಆಡಳಿತ

**ಅಧ್ಯಾಯ-V**
**ಸಂಸ್ಥೆಗಳು**

7. ಸ್ವೀಕರಣಾ ಕೇಂದ್ರಗಳು
8. ಪರಿಹಾರ ಕೇಂದ್ರಗಳು
9. ಸಂಸ್ಥೆಗಳ ವ್ಯವಸ್ಥಾಪನೆ
10. ಶಿಸ್ತಿನ ಜಾರಿ

**ಅಧ್ಯಾಯ-VI**
**ಪ್ರಕ್ರಿಯೆ ಮತ್ತು ದಂಡನೆಗಳು**

11. ದಸ್ತಗಿರಿ ಮತ್ತು ವಿಚಾರಣೆ
12. ಮ್ಯಾಜಿಸ್ಟ್ರೇಟನು ಭಿಕ್ಷುಕನನ್ನು ಪರಿಹಾರ ಕೇಂದ್ರಕ್ಕೆ ಕಳುಹಿಸತಕ್ಕದ್ದು
13. ದುರ್ಬಲರಾದ ಅಶಕ್ತರಾದ ಮತ್ತು ಉಡುಗಿ ಹೋದ ಭಿಕ್ಷುಕರು ಮತ್ತು ವಾಸಿಯಾಗದ ಯಾವುದೇ, ರೋಗದಿಂದ ನರಳುತ್ತಿರುವ ವ್ಯಕ್ತಿಗಳನ್ನು ದಸ್ತಗಿರಿ ಮಾಡತಕ್ಕದ್ದು ಮತ್ತು ಸ್ವೀಕರಣ ಕೇಂದ್ರಗಳಿಗೆ ಕಳುಹಿಸತಕ್ಕದ್ದು

14. ಕೆಲವು ಸನ್ನಿವೇಶಗಳಲ್ಲಿ ಬಿಕ್ಷುಕರ ವೈದ್ಯಕೀಯ ಪರೀಕ್ಷೆ ಮತ್ತು ಬಂಧನ
15. ಬಿಡುಗಡೆಯಾದ ಮೇಲೆ ಅಥವಾ ಅನುಮತಿಯನ್ನು ಪಡೆದು ಭಿಕ್ಷುಕನು ಸಂಸ್ಥೆಯನ್ನು ಬಿಡತಕ್ಕದ್ದು
16. ಪರಾರಿಯಾದ ಭಿಕ್ಷುಕರ ಬಗ್ಗೆ ಹೇಗೆ ವ್ಯವಹರಿಸತಕ್ಕದ್ದು
17. ದುಷ್ಪ್ರೇರಕರನ್ನು ಕಾರಾವಾಸದಿಂದ ಅಥವಾ ಜುಲ್ಮಾನೆ ಅಥವಾ ಅವರೆಡರಿಂದಲೂ ದಂಡಿಸತಕ್ಕದ್ದು
18. ಸಂಸ್ಥೆಗೆ ಅಥವಾ ಮ್ಯಜಿಸ್ಟ್ರೇಟನ ಬಳಿಗೆ ಹೋಗಲು ಭಿಕ್ಷುಕನು ನಿರಾಕರಿಸಿದರೆ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದು

## ಅಧ್ಯಾಯ-VII
## ಸಂಕೀರ್ಣ

19. ಒಂದು ಸಂಸ್ಥೆಯಿಂದ ಇನ್ನೊಂದು ಸಂಸ್ಥೆಗೆ ವರ್ಗಾವಣೆ
20. ಭಿಕ್ಷುಕರ ತಾತ್ಕಾಲಿಕ ಬಿಡುಗಡೆ
21. ಬೇಷರತ್ತಾಗಿ ಭಿಕ್ಷುಕರ ಬಿಡುಗಡೆ
22. ರಾಜ್ಯದಲ್ಲಿನ ಪರಿಹಾರ ಕೇಂದ್ರಗಳಿಂದ ಭಾರತದ ಇತರ ರಾಜ್ಯಗಳಲ್ಲಿರುವ ಅಂಥದೇ ಸ್ವರೂಪದ ಸಂಸ್ಥೆಗಳ ನಡುವೆ ವರ್ಗಾವಣೆ
23. ಈ ಅಧಿನಿಯಮದ ಮೇರೆಗಿನ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು
24. ಜುಲ್ಮಾನೆಗಳು
25. ಈ ಅಧಿನಿಯಮದ ಮೇರೆಗಿನ ಪ್ರಕರಣಗಳಿಗೆ ಆದ್ಯತೆ
26. ಸ್ವತ್ತನ್ನು ಅರ್ಜಿಸುವ ಅಧಿಕಾರ ಇತ್ಯಾದಿ
27. ಅಧಿಕಾರಿಗಳ ನೇಮಕಾತಿ
28. ಅಧಿಕಾರಿಗಳ ಸಂರಕ್ಷಣೆ
29. ಸಾರ್ವಜನಿಕ ನೌಕರ
30. ಕೇಂದ್ರ ಪರಿಹಾರ ನಿಧಿ
31. ಭಿಕ್ಷಾಟನ ಉಪಕರ
32. ಸಂದರ್ಶಕರ ಮಂಡಲಿ
33. ಪುನರೀಕ್ಷಣೆ
34. ಅಪೀಲು
35. ದುರ್ನಡತೆಗಾಗಿ ಆಪಾದನೆ
36. ವಾರ್ಷಿಕ ಲೆಕ್ಕಪತ್ರಗಳ ಪ್ರಕಟಣೆ
37. ಆಡಳಿತ ವರದಿ

## ಅಧ್ಯಾಯ-VIII
## ನಿಯಂತ್ರಣ

38. ಸರ್ಕಾರದ ಅಧಿಕಾರಗಳು
39. ವಿವಾದಗಳು
40. ನಿಯಮಗಳು
41. ನಿರಸನ
ಅನುಸೂಚಿ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

**1975ರ ಅಧಿನಿಯಮ 27.-** ಭಿಕ್ಷಾಟನೆ ನಿಷೇಧಕ್ಕೆ ಸಂಬಂಧಿಸಿದಂತೆ ರಾಜ್ಯದ ವಿವಿಧ ಪ್ರದೇಶಗಳಲ್ಲಿ ನಾಲ್ಕು ಅಧಿನಿಯಮಿತಿಗಳಿವೆ. ಪೂರ್ಣ ಮೈಸೂರು ರಾಜ್ಯಕ್ಕೆ ಈ ವಿಷಯದಲ್ಲಿ ಏಕರೂಪದ ಕಾನೂನು ಹೊಂದುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಆದ್ದರಿಂದ ಈ ವಿಧೇಯಕ.

(ಕರ್ನಾಟಕ ಸರ್ಕಾರಿ ರಾಜ್ಯಪತ್ರ (ವಿಶೇಷ) ಭಾಗIV-2ಎರ ದಿನಾಂಕ: 27.2.1973ರಂದು ಸಂ.209 ಪು.20ರಲ್ಲಿ ಪ್ರಕಟಿಸಲಾಗಿದೆ.)

**II**

**1982ರ ತಿದ್ದುಪಡಿ ಅಧಿನಿಯಮ 7.-** ಭಿಕ್ಷಾಟನೆ ನಿಷೇಧ ಅಧಿನಿಯಮದ ಉಪಬಂಧಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳಿಸಲು, ಸಂಗ್ರಹಿತ ಕೇಂದ್ರ ಪರಿಹಾರ ಸಮಿತಿಯನ್ನು ಹೊಂದುವುದು ಅವಶ್ಯಕವೆಂದು ಪರಿಗಣಿಸಲಾಗಿರುತ್ತದೆ. ಕೇಂದ್ರ ಪರಿಹಾರ ನಿಧಿಯನ್ನು ನಿರ್ವಹಿಸಲು ಸಣ್ಣ ಸಮಿತಿಯನ್ನು ರಚಿಸುವ ಪ್ರಸ್ತಾವನೆಯು ಸಹ ಇರುತ್ತದೆ.

ಈ ಅಧಿನಿಯಮದ ಉಲ್ಲಂಘನೆಗಾಗಿ ಪರಿಹಾರ ಕೇಂದ್ರದಲ್ಲಿನ ವಾಸದ ಅವಧಿಯನ್ನು ಆರು ತಿಂಗಳಿಂದ ಒಂದು ವರ್ಷಕ್ಕೆ ವಿಸ್ತರಿಸುವುದು ಅವಶ್ಯಕವೆಂದು ಸಹ ಪರಿಗಣಿಸಲಾಗಿದೆ.

ಮೇಲಿನ ವಿಷಯಗಳನ್ನು ಉಪಬಂಧಿಸುವುದಕ್ಕಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

(ಕರ್ನಾಟಕ ಸರ್ಕಾರಿ ರಾಜ್ಯಪತ್ರ (ವಿಶೇಷ) ಭಾಗIV-2ಎರ ದಿನಾಂಕ: 3.2.1982ರಂದು ಸಂ.76 ಪು.4ರಲ್ಲಿ ಪ್ರಕಟಿಸಲಾಗಿದೆ.)

**III**

**1988ರ ತಿದ್ದುಪಡಿ ಅಧಿನಿಯಮ 12.-** ಭಿಕ್ಷುಕರನ್ನು ರಾಜ್ಯದೊಳಗಿನ ಒಂದು ಸಂಸ್ಥೆಯಿಂದ ಇನ್ನೊಂದು ಸ್ವೀಕರಣ ಕೇಂದ್ರ, ಪರಿಹಾರ ಕೇಂದ್ರಕ್ಕೆ ವರ್ಗಾಹಿಸಲು ರಾಜ್ಯದಲ್ಲಿನ ಕೇಂದ್ರ ಪರಿಹಾರ ಸಮತಿ ಅಧ್ಯಕ್ಷರಿಗೆ ಅಧಿಕಾರಗಳನ್ನು ನೀಡಲು ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975ರ 19ನೇ ಪ್ರಕರಣದ ತಿದ್ದುಪಡಿ ಮಾಡುವುದು,

ಭಿಕ್ಷುಕರ ಪರಿಹಾರಕೇಂದ್ರಗಳ ನಡುವೆ ಅಂತರ-ರಾಜ್ಯ ವರ್ಗಾವಣೆಯನ್ನು ಸಾಧ್ಯವಾಗಿಸಲು ಸರ್ಕಾರದ ಬದಲಾಗಿ, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷರಿಗೆ ಅಧಿಕಾರಗಳನ್ನು ನೀಡಲು ಅಧಿನಿಯಮದ 22ನೇ ಪ್ರಕರಣದ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ಸರ್ಕಾರಿ ರಾಜ್ಯಪತ್ರ (ವಿಶೇಷ) ಭಾಗIV-2ಎರ ದಿನಾಂಕ: 23.01.1988ರಂದು ಸಂ.57 ಪು.3ರಲ್ಲಿ ಪ್ರಕಟಿಸಲಾಗಿದೆ.)

**IV**

**2003ರ ತಿದ್ದುಪಡಿ ಅಧಿನಿಯಮ 26.-** ಈ ಮುಂದಿನವುಗಳಿಗಾಗಿ ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.-

(i) ಯಾವುದೇ ವ್ಯಕ್ತಿಯು, 11ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ಬಂಧಪತ್ರವನ್ನು (bond), (5)ನೇ ಉಪಪ್ರಕರಣದ ಅಡಿಯಲ್ಲಿ ಜಾಮೀನನ್ನು ಬರೆದುಕೊಡುವಾಗಿನ ಮೊತ್ತವು ಅನುಕ್ರಮವಾಗಿ ಒಂದು ಸಾವಿರ ರೂಪಾಯಿಗಳು ಮತ್ತು ಎರಡು ಸಾವಿರ ರೂಪಾಯಿಗಳಾಗಿರತಕ್ಕದ್ದು;

(ii) 12ನೇ ಪ್ರಕರಣದಡಿಯಲ್ಲಿನ ಭಿಕ್ಷುಕನ ಬಂಧನದ ಅವಧಿಯನ್ನು ಹನ್ನೆರಡು ತಿಂಗಳುಗಳಿಗೆ ಬದಲಾಗಿ ಕನಿಷ್ಠ ಒಂದು ವರ್ಷದ ಅವಧಿಯಿಂದ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ನಿರ್ದಿಷ್ಟಪಡಿಸಲು;

(iii) 13ನೇ ಪ್ರಕರಣದಡಿಯಲ್ಲಿ ದುರ್ಬಲರಾದ, ಅಶಕ್ತರಾದ ಮತ್ತು ಕುಗ್ಗಿಹೋದ ಬಿಕ್ಷುಕರು ಮತ್ತು ವಾಸಿಯಾಗದ ಯಾವುದೇ ರೋಗದಿಂದ ನರಳುತ್ತಿರುವ ವ್ಯಕ್ತಿಗಳ ಬಂಧನದ ಅವಧಿಯನ್ನು ಹನ್ನೆರಡು ತಿಂಗಳುಗಳಿಗೆ ಬದಲಾಗಿ ಕನಿಷ್ಠ ಒಂದು ವರ್ಷದ ಅವಧಿಯಿಂದ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ನಿರ್ದಿಷ್ಟಪಡಿಸಲು;

(iv) ಕೇಂದ್ರೀಯ ಪರಿಹಾರ ನಿಧಿಗೆ ಬಾಕಿಯಿರುವ ಮೊತ್ತವನ್ನು ಪಾವತಿಸುವುದಕ್ಕೆ ಸ್ಥಳೀಯ ಪ್ರಾಧಿಕಾರದ ನಿಧಿಯ ಅಭಿರಕ್ಷಣೆ ಹೊಂದಿರುವ ಯಾವೊಬ್ಬ ವ್ಯಕ್ತಿಗೆ ನಿರ್ದೇಶಿಸಲು ಮತ್ತು ಅಂಥ ಆದೇಶದ ಪಾಲನೆಯಲ್ಲಿ ಮೊತ್ತವನ್ನು ಪಾವತಿಸದೇ ಇದ್ದಲ್ಲಿ ಭೂ ಕಂದಾಯದ ಬಾಕಿಯಾಗಿ ಅದನ್ನು ವಸೂಲಿ ಮಾಡಲು ಸರ್ಕಾರಕ್ಕೆ ಅಧಿಕಾರವನ್ನು ನೀಡುವುದಕ್ಕೆ.

ಆದ್ದರಿಂದ ಈ ವಿಧೇಯಕ.

(2002ರ ವಿಧಾನಸಭೆ ವಿಧೇಯಕ ಸಂಖ್ಯೆ.15 ಕಡತ ಸಂಖ್ಯೆ: ಸಂವ್ಯಶಾಇ 02 ಶಾಸನ 2002)

**V**

**2020ರ ತಿದ್ದುಪಡಿ ವಿಧೇಯಕ 43.-** ರಿಟ್ ಅರ್ಜಿ ಸಿವಿಲ್ ಸಂಖ್ಯೆ:1151/2017 (ಪಿಐಎಲ್-ಡಬ್ಲ್ಯು) ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿ ವಿರುದ್ಧ ಭಾರತ ಒಕ್ಕೂಟ ದಿನಾಂಕ: 24-04-2018 ರೊಡನೆ ಓದಿಕೊಂಡಂತೆ ರಿಟ್ ಅರ್ಜಿ (ಸಿವಿಲ್) ಸಂಖ್ಯೆ:767/2014 ಪಂಕಜ್ ಸಿನ್ಹಾ ವಿರುದ್ಧ ಭಾರತ ಒಕ್ಕೂಟ ದಿನಾಂಕ:05-07-2018 ರಲ್ಲಿ ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಅನುಸಾರವಾಗಿ ಕುಷ್ಠರೋಗ ಬಾಧಿತ ವ್ಯಕ್ತಿಗಳ ಸಂಬಂಧದಲ್ಲಿನ ತಾರತಮ್ಯಕಾರಕವಾದ ಉಪಬಂಧವನ್ನು ತೆಗೆದುಹಾಕುವುದಕ್ಕಾಗಿ ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975ನ್ನು (1975ರ ಕರ್ನಾಟಕ ಅಧಿನಿಯಮ 27) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2020ರ ವಿಧಾನಸಭೆ ವಿಧೇಯಕ ಸಂಖ್ಯೆ.27 ಕಡತ ಸಂಖ್ಯೆ: ಸಂವ್ಯಶಾಇ 34 ಶಾಸನ 2020)

(ಭಾರತ ಸಂವಿಧಾನದ ಏಳನೇ ಅನುಸೂಚಿಯ IIIನೇ ಪಟ್ಟಿಯ 15 ಮತ್ತು 16 ನಮೂದುಗಳು)

(ಕರ್ನಾಟಕ ಸರ್ಕಾರಿ ರಾಜ್ಯಪತ್ರ (ವಿಶೇಷ) ಭಾಗIVಎರ ದಿನಾಂಕ: 19.10.2020ರಂದು ಸಂ.473ರಲ್ಲಿ ಪ್ರಕಟಿಸಲಾಗಿದೆ.)

*****

## ಕರ್ನಾಟಕ ಅಧಿನಿಯಮ, 1975ರ ಸಂಖ್ಯೆ 27

(1975ರ ಜೂನ್ ಹತ್ತೊಂಬತ್ತನೇ ದಿವಸದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975

(1975ರ ಜೂನ್ ಆರನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆದಿದೆ)

(1982ರ 7, 1988ರ 12, 2003ರ 26 ಮತ್ತು 2020ರ 43ನೇ ಅಧಿನಿಯಮಗಳಿಂದ ತಿದ್ದುಪಡಿಯಾದಂತೆ)

ವ್ಯಕ್ತಿಗಳು ಭಿಕ್ಷೆ ಬೇಡುವುದನ್ನು ಆಶ್ರಯಿಸುವುದನ್ನು ನಿಷೇಧಿಸುವ ಮತ್ತು ಭಿಕ್ಷುಕರನ್ನು ಬಂಧನದಲ್ಲಿಡುವುದು ಅವರಿಗೆ ತರಬೇತಿ ಕೊಡುವುದು ಮತ್ತು ನಿಯೋಜನೆಯನ್ನು ಒದಗಿಸುವುದು ಇವುಗಳಿಗಾಗಿ ಭಿಕ್ಷುಕ ಅಪರಾಧಿಗಳ ಅಭಿರಕ್ಷೆ, ಅಧಿವಿಚಾರಣೆ ಮತ್ತು ದಂಡನೆಗಾಗಿ ಮತ್ತು ಕರ್ನಾಟಕ ರಾಜ್ಯದಲ್ಲಿ ಅಂಥ ವ್ಯಕ್ತಿಗಳಿಗೆ ಪರಿಹಾರ ಮತ್ತು ಪುನರ್ವಸತಿಗಾಗಿ ಉಪಬಂಧಿಸುವ ಅಧಿನಿಯಮ.

ವ್ಯಕ್ತಿಗಳು ಭಿಕ್ಷೆ ಬೇಡುವುದನ್ನು ಆಶ್ರಯಿಸುವುದನ್ನು ನಿಷೇಧಿಸುವುದು ಮತ್ತು ಭಿಕ್ಷುಕರನ್ನು ಬಂಧನದಲ್ಲಿಡುವುದು, ಅವರಿಗೆ ತರಬೇತಿ ಕೊಡುವುದು ಮತ್ತು ನಿಯೋಜನೆ ಒದಗಿಸುವುದು, ಭಿಕ್ಷುಕ ಅಪರಾಧಿಗಳ ಅಭಿರಕ್ಷೆ, ಅಧಿವಿಚಾರಣೆ ಮತ್ತು ದಂಡನೆಗಾಗಿ ಮತ್ತು ಕರ್ನಾಟಕ ರಾಜ್ಯದಲ್ಲಿ ಅಂಥ ವ್ಯಕ್ತಿಗಳಿಗೆ ಪರಿಹಾರ ಮತ್ತು ಪುನರ್ವಸತಿಗಾಗಿ ಉಪಬಂಧಿಸುವುದು ಅವಶ್ಯ ಮತ್ತು ವಿಹಿತವಾಗಿರುವುದರಿಂದ

ಭಾರತ ಗಣರಾಜ್ಯದ ಇಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.-

## ಅಧ್ಯಾಯ – I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**-(1) ಈ ಅಧಿನಿಯಮವನ್ನು, ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ರಾಜ್ಯದ ಪ್ರದೇಶಗಳಲ್ಲಿ ಅಂಥ [1][ದಿನಾಂಕಗಳಂದು][1] ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

ಪರಂತು, ಈ ಅಧಿನಿಯಮದ ಉಪಬಂಧಗಳನ್ನು ಯಾವುದೇ ಪ್ರದೇಶದಲ್ಲಿ ಭಿಕ್ಷುಕರ ಪರಿಹಾರಕ್ಕೆ ಆ ಪ್ರದೇಶಗಳಲ್ಲಿ ಸೂಕ್ತ ಸೌಲಭ್ಯಗಳು ಇರುವುವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದ ಹೊರತು ಆ ಯಾವುದೇ ಪ್ರದೇಶದಲ್ಲಿ ಜಾರಿಗೆ ತರತಕ್ಕುದಲ್ಲ.

1. ಅಧಿಸೂಚನೆ ಸಂ. ಎಸ್.ಡಬ್ಲ್ಯೂಡಿ 5 ಎಸ್ ಬಿ ಆರ್ 76 ದಿನಾಂಕ 26.3.1976ರ ಮೂಲಕ ದಿ. 1.4.1976 ರಿಂದ ಜಾರಿಗೆ ಬರುವಂತೆ ರಾಜ್ಯದ ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಮತ್ತು ಅಧಿಸೂಚನೆ ಸಂ. ಎಸ್ ಡ ಬ್ಲ್ಯೂ 15 ಎಸ್ ಬಿ ಆರ್ 97(1) ದಿನಾಂಕ 28.8.1997ರ ಮೂಲಕ ದಿನಾಂಕ 6.11.1997ರಿಂದ ಉಳಿದ ಪ್ರದೇಶಗಳಲ್ಲಿ ಅಧಿನಿಯಮವನ್ನು ಜಾರಿಗೆ ತರಲಾಗಿದೆ.

## ಅಧ್ಯಾಯ – II
## ಪರಿಭಾಷೆಗಳು

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) ``ಭಿಕ್ಷೆ'' ಎಂದರೆ ಹಣ, ಬೇಯಿಸಿದ ಅಥವಾ ಬೇಯಿಸದ ಆಹಾರ, ಧಾನ್ಯಗಳು ಅಥವಾ ಬಟ್ಟೆಬರೆ ಮೊದಲಾದಂಥ ಅಥವಾ ಮೌಲ್ಯದ ಇತರ ಯಾವುದೇ ವಸ್ತುವನ್ನು ಭಿಕ್ಷುಕನಿಗೆ ಪುಕ್ಕಟೆಯಾಗಿ ಕೊಟ್ಟಿರುವ ವಸ್ತು;

(2) ``ಭಿಕ್ಷುಕ'' ಎಂದರೆ ಮಗುವನ್ನು ಹೊರತುಪಡಿಸಿ,-

(ಎ) ಹಾಡುವುದು, ಕುಣಿಯುವುದು, ಭವಿಷ್ಯ ಹೇಳುವುದು, ಕೈಚಳಕಗಳನ್ನು ಮಾಡಿ ತೋರಿಸುವುದು ಅಥವಾ ವಸ್ತುಗಳನ್ನು ಮಾರುವುದು ಇವುಗಳಂಥ ಯಾವುದೇ ಸೋಗಿನಿಂದಾಗಲಿ ಅಥವಾ ಅದಿಲ್ಲದೆ ಆಗಲಿ ಸಾರ್ವಜನಿಕ ಸ್ಥಳದಲ್ಲಿ ಭಿಕ್ಷೆ ಯಾಚಿಸುವ ಅಥವಾ ಸ್ವೀಕರಿಸುವ;

(ಬಿ) ಭಿಕ್ಷೆಯಾಚಿಸುವ ಅಥವಾ ಸ್ವೀಕರಿಸುವ ಉದ್ದೇಶಕ್ಕಾಗಿ ಯಾವುದೇ ಖಾಸಗಿ ಸ್ಥಳವನ್ನು ಪ್ರವೇಶಿಸುವ;

(ಸಿ) ಭಿಕ್ಷೆಯನ್ನು ಪಡೆಯುವ ಅಥವಾ ಬಲಾತ್ಕಾರದಿಂದ ಪಡೆಯುವ ಉದ್ದೇಶದಿಂದ ಮನುಷ್ಯನ ಅಥವಾ ಪ್ರಾಣಿಯ ಯಾವುದೇ ಹುಣ್ಣು, ಗಾಯ, ಕ್ಷತಿ, ಅಂಗವಿಕಾರ ಅಥವಾ ರೋಗವನ್ನು ಕಾಣುವ ಹಾಗೆ ತೋರಿಸುವ ಅಥವಾ ಪ್ರದರ್ಶಿಸುವ;

(ಡಿ) ಯಾವುದೇ ಗೋಚರ ಜೀವನ ನಿರ್ವಹಣೋಪಾಯವಿಲ್ಲದೆ, ಭಿಕ್ಷೆ ಯಾಚಿಸುವ ಅಥವಾ ಸ್ವೀಕರಿಸುವ ಮೂಲಕವೇ ತಾನು ಜೀವಿಸುತ್ತಿರುವನೆಂಬ ಸ್ಥಿತಿಯಲ್ಲಿ ಅಥವಾ ಅದು ಸಂಭವವಾಗುವಂಥ ರೀತಿಯಲ್ಲಿ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಲೆದಾಡುವ ಅಥವಾ ಇರುವ;

(ಇ) ಭಿಕ್ಷೆ ಯಾಚಿಸುವ ಅಥವಾ ಸ್ವೀಕರಿಸುವ ಉದ್ದೇಶಕ್ಕಾಗಿ ಪ್ರದರ್ಶಿಕೆಯಂತೆ ಅವನನ್ನು ಉಪಯೋಗಿಸಿಕೊಳ್ಳಲು ಅವಕಾಶ ಕೊಡುವ

- ಯಾವನೇ ವ್ಯಕ್ತಿ:

ಪರಂತು, ಒಬ್ಬ ವ್ಯಕ್ತಿಯನ್ನು ಅವನು,-

(i) ನಿಯಮಿಸಿದ ರೀತಿಯಲ್ಲಿ ಭಿಕ್ಷೆ ಯಾಚಿಸಲು ಕೇಂದ್ರ ಪರಿಹಾರ ಸಮಿತಿಯು ಲೈಸೆನ್ಸ್ ಕೊಟ್ಟ ಧಾರ್ಮಿಕ ಭಿಕ್ಷುವಾಗಿದ್ದರೆ;

(ii) ರೂಢಿ ಅಥವಾ ಧರ್ಮದ ಮೂಲಕ ಅನುಮೋದಿಸಲಾದ ಯಾವುದೇ ಧಾರ್ಮಿಕವ್ರತ ಅಥವಾ ಕರ್ತವ್ಯದ ನಿರ್ವಹಣೆಯಲ್ಲಿ ಉಪದ್ರುವಕಾರಿಯಾಗದೆ ಖಾಸಗಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಭಿಕ್ಷೆಯನ್ನು ಸಂಗ್ರಹಿಸಿದರೆ; ಅಥವಾ

(iii) ಧಾರ್ಮಿಕವಾದಕ್ಕೆ ಆಗಿರಲಿ ಅಥವಾ ಜಾತ್ಯಾತೀತವಾದದ್ದೆ ಆಗಿರಲಿ ಯಾವುದೇ ಸಾರ್ವಜನಿಕ ಸಂಸ್ಥೆಗೆ ಅಥವಾ ಸಾರ್ವಜನಿಕರ ಒಳಿತಿಗಾಗಿ ಯಾವುದೇ ಉದ್ದೇಶವನ್ನು ವೃದ್ಧಿಗೊಳಿಸುವುದಕ್ಕಾಗಿ ನಗದಾಗಿ ಅಥವಾ ವಸ್ತು ರೂಪದಲ್ಲಿ ವಂತಿಗೆಗಳನ್ನು ಸಾರ್ವಜನಿಕರಿಂದ ಸಂಗ್ರಹಿಸಲು ಕೇಂದ್ರ ಪರಿಹಾರ ಸಮಿತಿಯು ಬರಹದಲ್ಲಿ ಅನುಮತಿ ಪಡೆದಿದ್ದರೆ; ಅಥವಾ

(iv) ಅವನ ವ್ಯಾಸಂಗವನ್ನು ಮುಂದುವರಿಸುವುದಕ್ಕಾಗಿ ಭಿಕ್ಷೆಯನ್ನು ಸಂಗ್ರಹಿಸುವ ವಿದ್ಯಾರ್ಥಿಯಾಗಿದ್ದರೆ,-

-ಭಿಕ್ಷುಕನೆಂದು ಭಾವಿಸತಕ್ಕದ್ದಲ್ಲ.

(3) 'ಕೇಂದ್ರ ಪರಿಹಾರ ಸಮಿತಿ' ಎಂದರೆ 4ನೇ ಪ್ರಕರಣದ ಮೇರೆಗೆ ಸರ್ಕಾರವು ರಚಿಸಿದ ಸಮಿತಿ;

(4) 'ಮಗು' ಎಂದರೆ ಹದಿನಾರು ವರ್ಷಗಳ ವಯಸ್ಸು ತುಂಬಿರದ ಹುಡುಗ ಅಥವಾ ಹದಿನೆಂಟು ವರ್ಷಗಳ ವಯಸ್ಸು ತುಂಬಿರದ ಹುಡುಗಿ;

(5) 'ಸರ್ಕಾರ' ಎಂದರೆ ರಾಜ್ಯಸರ್ಕಾರ;

(6) 'ಸಂಸ್ಥೆ' ಇದು ಸ್ವೀಕರಣ ಕೇಂದ್ರ, ಪರಿಹಾರ ಕೇಂದ್ರ ಕಾಲೋನಿ ವಸಾಹತು ಪ್ರದೇಶ ಅಥವಾ ಸರ್ಕಾರವು ಅಂಥದೆಂದು ಘೋಷಿಸಿದ ಯಾವುದೇ ಇತರ ಸಂಸ್ಥೆಯನ್ನು ಒಳಗೊಳ್ಳುತ್ತದೆ;

(7) 'ಸ್ಥಳೀಯ ಪ್ರದೇಶ' ಎಂದರೆ ಈ ಅಧಿನಿಯಮದ ಉದ್ದೇಶಗಳಿಗಾಗಿ, ಕಾಲಕಾಲಕ್ಕೆ ಸರ್ಕಾರವು ಅಧಿಸೂಚನೆಯ ಮೂಲಕ ಅಂಥದೆಂದು ಘೋಷಿಸಿದ ಪ್ರದೇಶ;

(8) 'ಸ್ಥಳೀಯ ಸಮಿತಿ' ಎಂದರೆ ಯಾವುದೇ ಸ್ಥಳೀಯ ಪ್ರದೇಶಕ್ಕಾಗಿ, ಕೇಂದ್ರ ಪರಿಹಾರ ಸಮಿತಿಯು ನೇಮಕ ಮಾಡಿದ ಸಮಿತಿ;

(9) 'ಅಧಿಸೂಚನೆ' ಎಂದರೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(10) 'ನಿಯಮಿಸಿದುದು' ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(11) 'ಸಾರ್ವಜನಿಕ ಸ್ಥಳ' ಎಂದರೆ ಸಾರ್ವಜನಿಕ ಉಪಯೋಗಕ್ಕಾಗಿ ಉದ್ದೇಶಿಸಲಾದ ಅಥವಾ ಅವರಿಗೆ ಪ್ರವೇಶ ಅವಕಾಶವಿರುವ ಯಾವುದೇ ಸ್ಥಳ ಮತ್ತು ಇದು ಯಾವುದೇ ಸಾರ್ವಜನಿಕ ವಾಹನವನ್ನು ಒಳಗೊಳ್ಳುತ್ತದೆ;

(12) 'ಸ್ವೀಕರಣ ಕೇಂದ್ರ' ಎಂದರೆ ಭಿಕ್ಷುಕರನ್ನು ಸ್ವೀಕರಣೆ ಮತ್ತು ತಾತ್ಕಾಲಿಕವಾಗಿ ಅವರನ್ನು ಇಟ್ಟುಕೊಳ್ಳುವುದಕ್ಕಾಗಿ ಕೇಂದ್ರ ಪರಿಹಾರ ಸಮಿತಿಯು ಸ್ಥಾಪಿಸಿದ ಕೇಂದ್ರ; ಮತ್ತು

(13) 'ಪರಿಹಾರ ಕೇಂದ್ರ' ಎಂದರೆ, ಅಲ್ಲಿಗೆ ಕಳುಹಿಸಿದ ಭಿಕ್ಷುಕರ ಪರಿಹಾರಕ್ಕಾಗಿ ಕೇಂದ್ರ ಪರಿಹಾರ ಸಮಿತಿಯು ಸ್ಥಾಪಿಸಿದ ಕೇಂದ್ರ.

## ಅಧ್ಯಾಯ - III
## ಭಿಕ್ಷೆ ಬೇಡುವುದರ ನಿಷೇಧ

**3. ಭಿಕ್ಷೆ ಬೇಡುವುದನ್ನು ನಿಷೇಧಿಸಿದೆ.-** ಈ ಅಧಿನಿಯಮವು ಜಾರಿಯಲ್ಲಿರುವಂಥ ಪ್ರದೇಶಗಳಲ್ಲಿ ಯಾವನೇ ವ್ಯಕ್ತಿಯು ಭಿಕ್ಷೆ ಬೇಡತಕ್ಕದ್ದಲ್ಲ.

## ಅಧ್ಯಾಯ - IV
## ರಚನೆ ಮತ್ತು ಆಡಳಿತ

**4. ಕೇಂದ್ರ ಪರಿಹಾರ ಸಮಿತಿ.-** (1) ಸರ್ಕಾರವು ಅಧಿಸೂಚನೆಯ ಮೂಲಕ ಕೇಂದ್ರ ಪರಿಹಾರ ಸಮಿತಿಯನ್ನು ರಚಿಸಬಹುದು. (ಇಲ್ಲಿ ಈ ಕೆಳಗೆ ಸಮಿತಿ ಎಂದು ಉಲ್ಲೇಖಿಸಲಾಗಿದೆ.)

[1][(2) ಸಮಿತಿಯು,-

(ಎ) ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ .. ಸದಸ್ಯ

(ಬಿ) ಸಮಾಜ ಕಲ್ಯಾಣ ನಿರ್ದೇಶಕರು, ಕರ್ನಾಟಕ .. ಸದಸ್ಯ

(ಸಿ) ಸರ್ಕಾರದ ಕಾರ್ಯದರ್ಶಿ, ಹಣಕಾಸು ಇಲಾಖೆ .. ಸದಸ್ಯ

(ಡಿ) ಸರ್ಕಾರದಿಂದ ನಾಮನಿರ್ದೇಶಿತರಾದ ನಾಲ್ವರು ಸರ್ಕಾರೇತರ ಸದಸ್ಯರು .. ಸದಸ್ಯ

-ಇವರನ್ನು ಒಳಗೊಂಡಿರತಕ್ಕದ್ದು.

ಸರ್ಕಾರವು ಸಮಿತಿಯ ಸದಸ್ಯರ ಪೈಕಿ ಒಬ್ಬನನ್ನು ಅದರ ಅಧ್ಯಕ್ಷರನ್ನಾಗಿ ನೇಮಕ ಮಾಡಬಹುದು ಮತ್ತು ಸಮಿತಿಯ ಸದಸ್ಯನಾಗಿರಬಹುದಾದ ಅಥವಾ ಸದಸ್ಯನಾಗಿಲ್ಲದಿರಬಹುದಾದವನನ್ನು ಕಾರ್ಯದರ್ಶಿಯಾಗಿ ನೇಮಕ ಮಾಡಬಹುದು.

(3) ರಾಜ್ಯ ಸರ್ಕಾರದ ಇಚ್ಛೆಗೆ ಒಳಪಟ್ಟು, ಸರ್ಕಾರೇತರ ಸದಸ್ಯರ ಪದಾವಧಿಯು ಮೂರು ವರ್ಷ ಅವಧಿಯದಾಗಿರತಕ್ಕದ್ದು:

ಪರಂತು, ಸಮಿತಿಯ ಸರ್ಕಾರೇತರ ಸದಸ್ಯನು ಸಮಿತಿಯ ಅನುಮತಿಯಿಲ್ಲದೆ ಸಮಿತಿಯ ಎರಡು ಅನುಕ್ರಮ ಸಭೆಗಳಿಗೆ ಅವನು ಗೈರುಹಾಜರಿಯಾದರೆ ಅವನು ಸದಸ್ಯನಾಗಿರುವುದು ನಿಂತುಹೋಗತಕ್ಕದ್ದು.

(4) (ಕ) ಸಮಿತಿಯಲ್ಲಿನ ಆಕಸ್ಮಿಕ ಅಥವಾ ಇತರ ಖಾಲಿ ಸ್ಥಾನವನ್ನು ಸರ್ಕಾರವು ನಿಯಮಿಸಿದ ರೀತಿಯಲ್ಲಿ ಭರ್ತಿ ಮಾಡತಕ್ಕದ್ದು.

(ಖ) ಸಮಿತಿಯಲ್ಲಿನ ಯಾವುದೇ ಸ್ಥಾನವು ಖಾಲಿಯಿದ್ದಾಗ ಮುಂದುವರಿಯುತ್ತಿರುವ ಸದಸ್ಯರು ಯಾವುದೇ ಖಾಲಿ ಸ್ಥಾನವು ಉಂಟಾಗಿಲ್ಲದಿದ್ದರೆ ಹೇಗೊ ಹಾಗೆ ಕಾರ್ಯನಿರ್ವಹಿಸಬಹುದು.

(5) ಸರ್ಕಾರೇತರ ಸದಸ್ಯರಿಗೆ ನಿಯಮಿಸಬಹುದಾದಂಥ ಪರಿಶ್ರಮಧನ ಮತ್ತು ಭತ್ಯಗಳನ್ನು ಸಂದಾಯ ಮಾಡತಕ್ಕದ್ದು.

(6) ಸಮಿತಿಯು, ಕನಿಷ್ಟ ಪಕ್ಷ ಎರಡು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.][1]

1. 1982ರ 7ನೇ ಅಧಿನಿಯಮದ ಮೂಲಕ ದಿನಾಂಕ 1.10.1981ರಿಂದ ಜಾರಿಗೆ ಬರುವಂತೆ (2)ರಿಂದ (6)ರವರೆಗಿನ ಉಪ ಪ್ರಕರಣಗಳನ್ನು ಪ್ರತಿಯೋಜಿಸಲಾಗಿದೆ.

(7) ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೊಳಪಟ್ಟ ಪರಿಹಾರದ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣವು ಸಮಿತಿಯಲ್ಲಿ ನಿಹಿತವಾಗಿರತಕ್ಕದ್ದು.

**5. ಸ್ಥಳೀಯ ಸಮಿತಿಗಳು.-** ಸಮಿತಿಯು, ಯಾವುದೇ ಸ್ಥಳೀಯ ಪ್ರದೇಶದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಗಳಿಗಾಗಿ ನಿಯಮಿಸಿದಂತೆ ಒಂದು ಸ್ಥಳೀಯ ಸಮಿತಿಯನ್ನು ರಚಿಸಬಹುದು.

**6. ಸ್ಥಳೀಯ ಆಡಳಿತ.-** (1) ಕೇಂದ್ರ ಪರಿಹಾರ ಸಮಿತಿಯ ನಿಯಂತ್ರಣ ಮತ್ತು ಈ ಬಗ್ಗೆ ರಚಿಸಿದ ನಿಯಮಗಳಿಗೊಳಪಟ್ಟು, ಯಾವುದೇ ಸ್ಥಳೀಯ ಪ್ರದೇಶದಲ್ಲಿ ಭಿಕ್ಷುಕರಿಗೆ ಪರಿಹಾರ ಒದಗಿಸುವ ಆಡಳಿತವು ಸ್ಥಳೀಯ ಸಮಿತಿಯಲ್ಲಿ ನಿಹಿತವಾಗಿರತಕ್ಕದ್ದು.

(2) ಸ್ಥಳೀಯ ಪ್ರದೇಶದ ಯಾವುದೇ ಭಾಗದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಸ್ಥಳೀಯ ಸಮಿತಿಯು ನಿಯಮಿಸಬಹುದಾದಂಥ ಉಪ-ಸಮಿತಿಗಳನ್ನು ರಚಿಸಬಹುದು.

## ಅಧ್ಯಾಯ - V
## ಸಂಸ್ಥೆಗಳು

**7. ಸ್ವೀಕರಣ ಕೇಂದ್ರಗಳು.-** ಕೇಂದ್ರ ಪರಿಹಾರ ಸಮಿತಿಯು, ಭಿಕ್ಷುಕರ ಸ್ವೀಕರಣೆ ಮತ್ತು ಅವರನ್ನು ತಾತ್ಕಾಲಿಕವಾಗಿ ಇಟ್ಟುಕೊಳ್ಳುವುದಕ್ಕಾಗಿ ಸ್ವೀಕರಣಾ ಕೇಂದ್ರಗಳನ್ನು ಒದಗಿಸಬಹುದು ಅಥವಾ ಅದು, ಅಧಿಸೂಚನೆಯ ಮೂಲಕ ಯಾವುದೇ ಸಂಸ್ಥೆಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಸ್ವೀಕರಣಾ ಕೇಂದ್ರ ಎಂಬುದಾಗಿ ಘೋಷಿಸಬಹುದು.

**8. ಪರಿಹಾರ ಕೇಂದ್ರಗಳು.-** ಕೇಂದ್ರ ಪರಿಹಾರ ಸಮಿತಿಯು 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಗಳನ್ನು ಅಲ್ಲಿಗೆ ಕಳುಹಿಸುವವರನ್ನು ಬಂಧನ ಪರಿಹಾರ ಮತ್ತು ಪುನರ್ವಸತಿಗಾಗಿ ಅವಶ್ಯವೆಂದು ಭಾವಿಸುವಂಥ ಸ್ಥಳಗಳಲ್ಲಿ ಸಂಸ್ಥೆಗಳನ್ನು ಸ್ಥಾಪಿಸಬಹುದು ಅಥವಾ ಅದು ಅಸ್ತಿತ್ವದಲ್ಲಿರುವ ಯಾವುದೇ ಸಂಸ್ಥೆಯನ್ನು ಅಧಿಸೂಚನೆಯ ಮೂಲಕ ಪರಿಹಾರ ಕೇಂದ್ರ ಎಂಬುದಾಗಿ ಘೋಷಿಸಬಹುದು.

**9. ಸಂಸ್ಥೆಗಳ ವ್ಯವಸ್ಥಾಪನೆ.-** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕೇಂದ್ರ ಪರಿಹಾರ ಸಮಿತಿಯು, ಸಂಸ್ಥೆಗಳ ಸರಿಯಾದ ವ್ಯವಸ್ಥಾಪನೆಗಾಗಿ ಮತ್ತು ಅದರಲ್ಲಿರುವ ನಿವಾಸಿಗಳ ರಕ್ಷಣೆಗಾಗಿ ವ್ಯವಸ್ಥೆ ಮಾಡತಕ್ಕದ್ದು.

(2) ಯಾವುದೇ ಸಂಸ್ಥೆಯಲ್ಲಿ ಬಂಧಿಸಿಟ್ಟ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಬಹುದಾದಂಥ ಶಿಸ್ತಿನ ನಿಯಮಗಳಿಗೊಳಪಟ್ಟಿರತಕ್ಕದ್ದು.

**ವಿವರಣೆ:-** `ಶಿಸ್ತು' ಎಂಬುದು ದೈಹಿಕ ಶ್ರಮ ಮತ್ತು ಕಠಿಣ ಶ್ರಮದ ಜಾರಿಗೊಳಿಸುವಿಕೆಯನ್ನು ಒಳಗೊಳ್ಳುತ್ತದೆ.

**10. ಶಿಸ್ತಿನ ಜಾರಿ.-** ಕೇಂದ್ರ ಪರಿಹಾರ ಸಮಿತಿಯು, ಯಾವುದೇ ಸಂಸ್ಥೆಯ ಪ್ರಭಾರಿ ಅಧಿಕಾರಿಗೆ ಅಂಥ ಸಂಸ್ಥೆಯಲ್ಲಿ ನಿಯಮಿಸಿದ ರೀತಿಯಲ್ಲಿ ಶಿಸ್ತನ್ನು ಜಾರಿಗೊಳಿಸಲು ಅಧಿಕೃತಗೊಳಿಸಬಹುದು.

## ಅಧ್ಯಾಯ - VI
## ಪ್ರಕ್ರಿಯೆ ಮತ್ತು ದಂಡನೆಗಳು

**11. ದಸ್ತಗಿರಿ ಮತ್ತು ವಿಚಾರಣೆ.-** (1) 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಮಗುವನ್ನು ಹೊರತುಪಡಿಸಿ ಯಾವನೇ ಇತರ ವ್ಯಕ್ತಿಯನ್ನು ಕಾಣುವ ಯಾವನೇ ಪೊಲೀಸ್ ಅಧಿಕಾರಿ ಅಥವಾ ಈ ಬಗ್ಗೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸರ್ಕಾರವು ಅಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯು ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡತಕ್ಕದ್ದು ಮತ್ತು ಅಂಥ ದಸ್ತಗಿರಿಗಾಗಿನ ಕಾರಣಗಳನ್ನು ಅವನಿಗೆ ತಿಳಿಸತಕ್ಕದ್ದು ಮತ್ತು ಅವನನ್ನು ಕೂಡಲೇ ಅತಿ ಸಮೀಪದ ಸ್ವೀಕರಣ ಕೇಂದ್ರಕ್ಕೆ ಸ್ಥಳಾಂತರಿಸತಕ್ಕದ್ದು.

(2) ಸ್ವೀಕರಣ ಕೇಂದ್ರದ ಪ್ರಭಾರದಲ್ಲಿರುವ ಅಧಿಕಾರಿಯು ಆ ತರುವಾಯ ವಿಳಂಬವಿಲ್ಲದೆ ನಿಯಮಿಸಬಹುದಾದಂಥ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಬಿಡುಗಡೆ ಮಾಡಿದರೆ ಆ ವ್ಯಕ್ತಿಯು ಭಿಕ್ಷೆ ಬೇಡುವುದನ್ನು ಆಶ್ರಯಿಸುವುದಿಲ್ಲವೆಂದು ಮನದಟ್ಟು ಮಾಡಿಕೊಂಡರೆ, ಅವನನ್ನು ತಕ್ಷಣವೇ ಜಾಮೀನು ಸಹಿತ ಅಥವಾ ಜಾಮೀನಿಲ್ಲದೆ ಬಿಡುಗಡೆ ಮಾಡತಕ್ಕದ್ದು.

(3) (1)ನೇ ಉಪ-ಪ್ರಕರಣದ ಮೇರೆಗೆ ದಸ್ತಗಿರಿ ಮಾಡಿದ ವ್ಯಕ್ತಿಯನ್ನು (2)ನೇ ಉಪ-ಪ್ರಕರಣದ ಮೇರೆಗೆ ತಕ್ಷಣವೇ ಬಿಡುಗಡೆ ಮಾಡದಿದ್ದರೆ, ಸ್ವೀಕರಣ ಕೇಂದ್ರದ ಪ್ರಭಾರದಲ್ಲಿರುವ ಅಧಿಕಾರಿಯು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಮಹಾನಗರ ಮ್ಯಾಜಿಸ್ಟ್ರೇಟನ ಮುಂದೆ ದಸ್ತಗಿರಿ ಮಾಡಿದ ಸ್ಥಳದಿಂದ ಅಂಥ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ಪ್ರಯಾಣ ಮಾಡಲು ಅವಶ್ಯವಾದ ಕಾಲವನ್ನು ಹೊರತುಪಡಿಸಿ ಅಂಥ ದಸ್ತಗಿರಿಯ ಇಪ್ಪತ್ತನಾಲ್ಕು ಗಂಟೆಗಳ ಅವಧಿಯೊಳಗಾಗಿ ಹಾಜರುಪಡಿಸತಕ್ಕದ್ದು:

ಪರಂತು, (1)ನೇ ಉಪ-ಪ್ರಕರಣದ ಮೇರೆಗೆ ದಸ್ತಗಿರಿ ಮಾಡಿದ ಯಾವನೇ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನ ಅಧಿಕಾರವಿಲ್ಲದೆ ಸದರಿ ಅವಧಿಯನ್ನು ಮೀರಿ ಅಭಿರಕ್ಷೆಯಲ್ಲಿ ಬಂಧಿಸಿಡತಕ್ಕುದಲ್ಲ.

(4) (3)ನೇ ಉಪಪ್ರಕರಣದ ಮೇರೆಗೆ ಯಾವ ಮ್ಯಾಜಿಸ್ಟ್ರೇಟನ ಮುಂದೆ ವ್ಯಕ್ತಿಯನ್ನು ಹಾಜರುಪಡಿಸಲಾಗಿದೆಯೋ ಆ ಮ್ಯಾಜಿಸ್ಟ್ರೇಟನು ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಭಿಕ್ಷೆ ಬೇಡುವ ಅಪರಾಧವನ್ನು ಮಾಡಿರುವನೆಂದು ಅವನಿಗೆ ಮನದಟ್ಟಾದರೆ, ಆದರೆ ಅವನು ಅಂಥ ಅಪರಾಧವನ್ನು ಮಾಡುವುದಿಲ್ಲವೆಂದು ಮಾತುಕೊಟ್ಟರೆ ಅವನು [1][ಒಂದು ಸಾವಿರ ರೂಪಾಯಿಗಳ][1] ಮೊತ್ತಕ್ಕೆ ಬಂಧಪತ್ರವನ್ನು ಒದಗಿಸಿದ ಮೇಲೆ ಅವನನ್ನು ಬಿಡುಗಡೆ ಮಾಡತಕ್ಕದ್ದು.

1. 2003ರ 26ನೇ ಅಧಿನಿಯಮದ ಮೂಲಕ ದಿ. 21.5.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(5) (4)ನೇ ಉಪ-ಪ್ರಕರಣದ ಮೇರೆಗೆ ಬಿಡುಗಡೆಯಾದ ಯಾವನೇ ವ್ಯಕ್ತಿಯನ್ನು ಅಂಥದೇ ಅಪರಾಧಕ್ಕಾಗಿ ಯಾವನೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ ಅಥವಾ ನ್ಯಾಯಿಕ ಮ್ಯಾಜಿಸ್ಟ್ರೇಟ ಅಥವಾ ಮಹಾನಗರ ಮ್ಯಾಜಿಸ್ಟ್ರೇಟ ಮುಂದೆ ಪುನಃ ಹಾಜರುಪಡಿಸಿದರೆ ಮತ್ತು 3ನೇ ಪ್ರಕರಣದ ಉಲ್ಲಂಘನೆಯನ್ನು ಅವನ ವಿರುದ್ಧ ರುಜುವಾತುಪಡಿಸಿದರೆ, [1][ಎರಡು ಸಾವಿರ ರೂಪಾಯಿಗಳ ಮೊತ್ತ][1] ಹಾಗೂ ಜಾಮೀನಿಲ್ಲದೆ ಅವನನ್ನು ಬಿಡುಗಡೆ ಮಾಡತಕ್ಕುದಲ್ಲ.

**12. ಮ್ಯಾಜಿಸ್ಟ್ರೇಟನು ಭಿಕ್ಷುಕನನ್ನು ಪರಿಹಾರ ಕೇಂದ್ರಕ್ಕೆ ಕಳುಹಿಸತಕ್ಕದ್ದು.-** (1) 11ನೇ ಪ್ರಕರಣದ ಮೇರೆಗೆ ಯಾವ ವ್ಯಕ್ತಿಯ ವಿರುದ್ಧ ಕ್ರಮವನ್ನು ಕೈಗೊಳ್ಳಲಾಗಿದೆಯೋ ಆ ವ್ಯಕ್ತಿಯನ್ನು, ಅಂಥದೇ ಅಪರಾಧಕ್ಕಾಗಿ ಅಂಥ ವ್ಯಕ್ತಿಯು, ಸದರಿ ಪ್ರಕರಣದಲ್ಲಿ ಒಳಗೊಂಡ ನಿರ್ದೇಶನಗಳನ್ನು ಪಾಲಿಸುವುದಿಲ್ಲವೆಂದು ಅಥವಾ ಪಾಲಿಸಲು ಅಸಮರ್ಥನಾಗಿರುವನೆಂಬ ಕಾರಣದ ಮೇಲೆ ಪುನಃ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಿದರೆ ಮತ್ತು ಮ್ಯಾಜಿಸ್ಟ್ರೇಟನು ವಿಚಾರಣೆ ನಡೆಸಿದ ಮೇಲೆ ಆ ವ್ಯಕ್ತಿಯು 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿರುವನೆಂದು ನಿರ್ಣಯಿಸಿದರೆ ಅವನು ಅವನನ್ನು ಅಪರಾಧಿ ಎಂದು ನಿರ್ಣಯಿಸತಕ್ಕದ್ದು ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ [1][ಒಂದು ವರ್ಷವನ್ನು ಮೀರದಂಥ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ][1] ಅವಧಿಗಾಗಿ ಅತಿ ಸಮೀಪದ ಪರಿಹಾರ ಕೇಂದ್ರದಲ್ಲಿ ಬಂಧನದಲ್ಲಿರಿಸುವ ಶಿಕ್ಷೆಯನ್ನು ಕೊಡತಕ್ಕದ್ದು.

1. 2003ರ 26ನೇ ಅಧಿನಿಯಮದ ಮೂಲಕ ದಿ. 21.5.2003ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (1)ನೇ ಉಪಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನು ಮಾಡಿದ ಬಂಧನದ ಆದೇಶವನ್ನು ಯಾವುದೇ ಕಾಲದಲ್ಲಿ ರದ್ದುಗೊಳಿಸಬಹುದು ಅಥವಾ ಮಾರ್ಪಾಟು ಮಾಡಬಹುದು.

**13. ದುರ್ಬಲರಾದ, ಅಶಕ್ತರಾದ ಮತ್ತು ಉಡುಗಿಹೋದ ಭಿಕ್ಷುಕರು ಮತ್ತು ವಾಸಿಯಾಗದ ಯಾವುದೇ ರೋಗದಿಂದ ನರಳುತ್ತಿರುವ ವ್ಯಕ್ತಿಗಳನ್ನು ದಸ್ತಗಿರಿ ಮಾಡತಕ್ಕದ್ದು ಮತ್ತು ಸ್ವೀಕರಣ ಕೇಂದ್ರಗಳಿಗೆ ಕಳುಹಿಸತಕ್ಕದ್ದು.-** (1) 11ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸ್ವೀಕರಣ ಕೇಂದ್ರದ ಪ್ರಭಾರದಲ್ಲಿರುವ ಅಧಿಕಾರಿಯು IIನೇ ಪ್ರಕರಣದ (2)ನೇ ಉಪ-ಪ್ರಕರಣದ ಅನುಸರಣೆಯಲ್ಲಿ ನಡೆಸಿದ ವಿಚಾರಣೆಯಲ್ಲಿ ಮಗುವನ್ನು ಹೊರತುಪಡಿಸಿ, ಯಾವನೇ ಇತರ ವ್ಯಕ್ತಿಯು ದುರ್ಬಲ, ಅಶಕ್ತ ಉಡುಗಿಹೋಗಿರುವನೆಂದು ಅಥವಾ ಯಾವುದೇ ಅಸಹ್ಯಕರ ಅಥವಾ ವಾಸಿಯಾಗದ ರೋಗದಿಂದ ನರಳುತ್ತಿರುವನೆಂದು ನಿರ್ಣಯಿಸಿದರೆ, ಅವನು ಆ ವ್ಯಕ್ತಿಯಿಂದ ಅವನಿಗೆ ಬಂಧುಗಳು ಯಾರಾದರೂ ಇದ್ದಾರೆಯೇ ಎಂದು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು

ಯಾರಾದರೂ ಇದ್ದರೆ ಅವರನ್ನು ಕೂಡಲೇ ಕರೆಯಿಸತಕ್ಕದ್ದು ಮತ್ತು ವಿಚಾರಣೆಯ ತರುವಾಯ ಅವನಿಗೆ ಆ ವ್ಯಕ್ತಿಯನ್ನು ರಕ್ಷಿಸಲಾಗುವುದಿಲ್ಲವೆಂದು ಕಂಡುಬಂದರೆ ಅಥವಾ ಬಂಧುಗಳು ಯಾರೂ ಇಲ್ಲದಿದ್ದರೆ ಸ್ವೀಕರಣ ಕೇಂದ್ರದ ಪ್ರಭಾರದಲ್ಲಿರುವ ಅಧಿಕಾರಿಯು ಅವನ ವಿಚಾರಣೆಯ ವರದಿಯೊಂದಿಗೆ ಕೂಡಲೇ ಅವನನ್ನು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ ಅಥವಾ ನ್ಯಾಯಿಕ ಮ್ಯಾಜಿಸ್ಟ್ರೇಟ ಅಥವಾ ಮಹಾನಗರ ಮ್ಯಾಜಿಸ್ಟ್ರೇಟನ ಮುಂದೆ ದಸ್ತಗಿರಿ ಮಾಡಿದ ಸ್ಥಳದಿಂದ ಅಂಥ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ಪ್ರಯಾಣ ಮಾಡಲು ಅವಶ್ಯವಾದ ಕಾಲವನ್ನು ಹೊರತುಪಡಿಸಿ, ಅವನನ್ನು ದಸ್ತಗಿರಿ ಮಾಡಿದ ಇಪ್ಪತ್ನಾಲ್ಕು ಗಂಟೆಗಳ ಅವಧಿಯೊಳಗೆ ಹಾಜರುಪಡಿಸತಕ್ಕದ್ದು:

ಪರಂತು, ದಸ್ತಗಿರಿ ಮಾಡಿದ ಯಾವನೇ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನ ಅಧಿಕಾರವಿಲ್ಲದೆ ಇಪ್ಪತ್ತನಾಲ್ಕು ಗಂಟೆಗಳ ಅವಧಿಯನ್ನು ಮೀರಿ ಅಭಿರಕ್ಷೆಯಲ್ಲಿ ಬಂಧಿಸಿಡತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಿದ ವ್ಯಕ್ತಿಯು ಅಂಥ ಮ್ಯಾಜಿಸ್ಟ್ರೇಟನು ವಿಚಾರಣೆ ಮಾಡಿದ ಮೇಲೆ 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿರುವುದಾಗಿ ಕಂಡುಬಂದರೆ ಮ್ಯಾಜಿಸ್ಟ್ರೇಟನು, ಅವನನ್ನು ಅಪರಾಧಿ ಎಂದು ನಿರ್ಣಯಿಸತಕ್ಕದ್ದು ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ [1][ಒಂದು ವರ್ಷಕ್ಕೆ ಮೀರದ ಆದರೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ][1] ಅವಧಿಗಾಗಿ ಅತಿ ಸಮೀಪದ ಪರಿಹಾರ ಕೇಂದ್ರದಲ್ಲಿ ಬಂಧನದಲ್ಲಿಡುವ ಶಿಕ್ಷೆಯನ್ನು ಕೊಡತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟನು ಮಾಡಿದ ಬಂಧನ ಆದೇಶವನ್ನು ಅಂಥ ಮ್ಯಾಜಿಸ್ಟ್ರೇಟನು ಯಾವುದೇ ಕಾಲದಲ್ಲಿ ರದ್ದುಗೊಳಿಸಬಹುದು ಅಥವಾ ಮಾರ್ಪಾಟು ಮಾಡಬಹುದು.

1. 2003ರ 26ನೇ ಅಧಿನಿಯಮದ ಮೂಲಕ ದಿ. 21.5.2003ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**14. ಕೆಲವು ಸನ್ನಿವೇಶಗಳಲ್ಲಿ ಭಿಕ್ಷುಕರ ವೈದ್ಯಕೀಯ ಪರೀಕ್ಷೆ ಮತ್ತು ಬಂಧನ.**-(1) ಮ್ಯಾಜಿಸ್ಟ್ರೇಟನ ಯಾವುದೇ ಆದೇಶದ ಮೇರೆಗೆ ಸಂಸ್ಥೆಯಲ್ಲಿ ಬಂಧನದಲ್ಲಿಟ್ಟಿರುವ ಯಾವನೇ ಭಿಕ್ಷುಕನು, ಮಾನಸಿಕ ಅಸ್ವಸ್ಥತೆ ಅಥವಾ ಅಂಟುರೋಗದಿಂದ ನರಳುತ್ತಿರುವನೆಂದು ಸರ್ಕಾರಕ್ಕೆ ಕಂಡುಬಂದಿರುವಲ್ಲಿ, ಸರ್ಕಾರವು ಭಿಕ್ಷುಕನು ಮಾನಸಿಕ ಅಸ್ವಸ್ಥನಾಗಿರುವನೆಂದು ಅಥವಾ ಅಂಟುರೋಗದಿಂದ ನರಳುತ್ತಿರುವನೆಂಬುದಕ್ಕಾಗಿನ ಕಾರಣಗಳನ್ನು ನಿರೂಪಿಸಿ ಆದೇಶದ ಮೂಲಕ ಅವನನ್ನು ಮಾನಸಿಕ ಆರೋಗ್ಯ ಸಂಸ್ಥೆಗೆ ಅಥವಾ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗೆ ಅಥವಾ ವೈದ್ಯಕೀಯ ಸಂಸ್ಥೆಗೆ ಅಥವಾ ಇತರ ಸುರಕ್ಷಿತ ಅಭಿರಕ್ಷೆಯ ಇತರ ಸ್ಥಳಕ್ಕೆ ಅವನನ್ನು ಸ್ಥಳಾಂತರಿಸುವಂತೆ ಮತ್ತು ಅಲ್ಲಿ ಯಾವ ಅವಧಿಗಾಗಿ ಅವನನ್ನು ಬಂಧನದಲ್ಲಿಡಲು ಆದೇಶಿಸಲಾಗಿದೆಯೋ ಅಂಥ ಉಳಿದ ಅವಧಿಯಲ್ಲಿ ಸರ್ಕಾರವು ನಿರ್ದೇಶಿಸುವಂತೆ ಅಥವಾ ಆ ಅವಧಿಯು ಮುಕ್ತಾಯವಾದ ಮೇಲೆ ಭಿಕ್ಷುಕನ ಅಥವಾ ಇತರರ ಸುರಕ್ಷತೆಗಾಗಿ ಅವನನ್ನು ವೈದ್ಯಕೀಯ ರಕ್ಷಣೆಯಲ್ಲಿ ಅಥವಾ ಚಿಕಿತ್ಸೆಯಲ್ಲಿ ಇನ್ನೂ ಬಂಧನದಲ್ಲಿಡುವುದು ಅವಶ್ಯವೆಂದು ಸರ್ಕಾರಿ ವೈದ್ಯಾಧಿಕಾರಿಯು ಪ್ರಮಾಣೀಕರಿಸಿದರೆ ಆಗ ಅವನನ್ನು ಕಾನೂನಿಗನುಸರವಾಗಿ ಬಿಡುಗಡೆ ಮಾಡುವವರೆಗೆ ಅಲ್ಲಿ ಇಟ್ಟುಕೊಂಡಿರಲು ಮತ್ತು ಚಿಕಿತ್ಸೆ ಮಾಡಲು ಆದೇಶಿಸಬಹುದು.

(2) ಭಿಕ್ಷುಕನ ಮಾನಸಿಕ ಅಸ್ವಸ್ಥತೆಯು ಕೊನೆಗೊಂಡಿರುವುದೆಂದು ಅಥವಾ ಅಂಟುರೋಗವು ವಾಸಿಯಾಗಿದೆಯೆಂದು ಸರ್ಕಾರಕ್ಕೆ ಕಂಡುಬಂದಿರುವಲ್ಲಿ, ಸರ್ಕಾರವು ಭಿಕ್ಷುಕನ ವಶವನ್ನು ಹೊಂದಿರುವ ವ್ಯಕ್ತಿಗೆ ಅವನನ್ನು ಅಭಿರಕ್ಷೆಯಲ್ಲಿಡಲು ಇನ್ನೂ ಹೊಣೆಗಾರನಾಗಿದ್ದರೆ, ಅವನನ್ನು ಯಾವ ಸಂಸ್ಥೆಯಿಂದ ಸ್ಥಳಾಂತರಿಸಲಾಯಿತೋ ಆ ಸಂಸ್ಥೆಗೆ ಕಳುಹಿಸಲು ಅಥವಾ ಭಿಕ್ಷುಕನನ್ನು ಇನ್ನೂ ಅಭಿರಕ್ಷೆಯಲ್ಲಿಡಲು ಅವನು ಹೊಣೆಗಾರನಾಗಿದ್ದರೆ, ಅವನನ್ನು ಬಿಡುಗಡೆ ಮಾಡುವಂತೆ ಆದೇಶಿಸಲು ಆದೇಶದ ಮೂಲಕ ನಿರ್ದೇಶಿಸತಕ್ಕದ್ದು.

(3) (2)ನೇ ಉಪಪ್ರಕರಣದ ಉಪಬಂಧಕ್ಕೊಳಪಟ್ಟು ಮಾನಸಿಕ ಆರೋಗ್ಯ ರಕ್ಷಣೆ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 10) ಅಥವಾ ರಾಜ್ಯದ ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಸಂವಾದಿ ಉಪಬಂಧವು, ಅವನನ್ನು ಬಂಧನದಲ್ಲಿಡಬೇಕೆಂದು ಆದೇಶಿಸಿರುವಂಥ ಅವಧಿಯು ಮುಕ್ತಾಯವಾದ ತರುವಾಯ (1)ನೇ ಉಪಪ್ರಕರಣದ ಮೇರೆಗೆ ಮಾನಸಿಕ ಆರೋಗ್ಯ ಸಂಸ್ಥೆ ಅಥವಾ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆ ಅಥವಾ ವೈದ್ಯಕೀಯ ಸಂಸ್ಥೆಯಲ್ಲಿ ಬಂಧಿಸಿಟ್ಟಿರುವ ಪ್ರತಿಯೊಬ್ಬ ಭಿಕ್ಷುಕನಿಗೂ ಅನ್ವಯಿಸತಕ್ಕದ್ದು ಮತ್ತು ಆ ಉಪಪ್ರಕರಣದ ಮೇರೆಗೆ ಮಾನಸಿಕ ಆರೋಗ್ಯ ಸಂಸ್ಥೆ ಅಥವಾ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆ ಅಥವಾ ವೈದ್ಯಕೀಯ ಸಂಸ್ಥೆಯಲ್ಲಿ ಭಿಕ್ಷುಕನನ್ನು ಬಂಧಿಸಿಟ್ಟಿರುವಂಥ ಕಾಲವನ್ನು ಅವನನ್ನು ಬಂಧನದಲ್ಲಿಡಬೇಕೆಂದು ಮ್ಯಾಜಿಸ್ಟ್ರೇಟನು ಆದೇಶ ಮಾಡಬಹುದಾದಂಥ ಅವಧಿಯ ಭಾಗವೆಂದು ಪರಿಗಣಿಸತಕ್ಕದ್ದು:

ಪರಂತು, ಭಿಕ್ಷುಕನ ಮಾನಸಿಕ ಅಸ್ವಸ್ಥತೆ ಅಥವಾ ಯಾವುದೇ ಅಂಟುರೋಗದ ಕಾರಣದಿಂದಾಗಿ ಭಿಕ್ಷುಕನ ಸ್ಥಳಾಂತರಣವು ಕೂಡಲೇ ಅವಶ್ಯವಾಗಿರುವಲ್ಲಿ ಭಿಕ್ಷುಕನನ್ನು ಬಂಧನದಲ್ಲಿಟ್ಟಿರುವಂಥ ಸಂಸ್ಥೆಯ ಪ್ರಾಧಿಕಾರಿಗಳಿಗೆ ಮಾನಸಿಕ ಆರೋಗ್ಯ ರಕ್ಷಣೆ ಅಧಿನಿಯಮ, 2017ರ (2017ರ ಕೇಂದ್ರ ಅಧಿನಿಯಮ 10) ಮೇರೆಗೆ ಅಥವಾ ರಾಜ್ಯದ ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿರುವ ಯಾವುದೇ ಸಂವಾದಿ ಕಾನೂನಿನ ಮೇರೆಗೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯಕ್ಕೆ ಈ ವಿಷಯದಲ್ಲಿ ಸರ್ಕಾರದ ಆದೇಶವನ್ನು ಪಡೆಯಬಹುದಾದಂಥ ಕಾಲದವರೆಗೆ, ಅವನನ್ನು ಮಾನಸಿಕ ಆರೋಗ್ಯ ಸಂಸ್ಥೆಗೆ ಅಥವಾ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗೆ ಅಥವಾ ವೈದ್ಯಕೀಯ ಸಂಸ್ಥೆಗೆ ಒಪ್ಪಿಸಲು ಕೂಡಲೇ ಆದೇಶ ಮಾಡುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಲು ಅವಕಾಶವಿರತಕ್ಕದ್ದು.][1]

1. 2020ರ ಅಧಿನಿಯಮ 43ರ ಮೂಲಕ ದಿನಾಂಕ: 19.10.2020ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿದೆ.

**15. ಬಿಡುಗಡೆಯಾದ ಮೇಲೆ ಅಥವಾ ಅನುಮತಿಯನ್ನು ಪಡೆದು ಭಿಕ್ಷುಕನು ಸಂಸ್ಥೆಯನ್ನು ಬಿಡತಕ್ಕದ್ದು.-** ಯಾವುದೇ ಸಂಸ್ಥೆಗೆ ಸೇರಿಸಲಾಗಿರುವ ಯಾವುದೇ ವ್ಯಕ್ತಿಯ ಬಿಡುಗಡೆಯ ಆದೇಶವಿಲ್ಲದೆ ಅಥವಾ ಸಂಸ್ಥೆಯ ಪ್ರಭಾರದಲ್ಲಿರುವ ಅಧಿಕಾರಿಯ ಲಿಖಿತದಲ್ಲಿನ ಅನುಮತಿ ಇಲ್ಲದೆ ಅದನ್ನು ಬಿಡತಕ್ಕುದಲ್ಲ.

**16. ಪರಾರಿಯಾದ ಭಿಕ್ಷುಕರ ಬಗ್ಗೆ ಹೇಗೆ ವ್ಯವಹರಿಸತಕ್ಕದ್ದು.-** 15ನೇ ಪ್ರಕರಣವನ್ನು ಉಲ್ಲಂಘಿಸಿ ಅಂಥ ಸಂಸ್ಥೆಯನ್ನು ವ್ಯಕ್ತಿಯು ಬಿಟ್ಟಿದ್ದಾನೆಂದು ಯಾವುದೇ ಸಂಸ್ಥೆಯ ಪ್ರಭಾರದಲ್ಲಿರುವ ಅಧಿಕಾರಿಯು ವರದಿಯ ಮೇಲೆ ಯಾವನೇ ಪೊಲೀಸ್ ಅಧಿಕಾರಿ ಅಥವಾ ಈ ಬಗ್ಗೆ ಸರ್ಕಾರವು ಅಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯು ಅಂಥ ವ್ಯಕ್ತಿಯನ್ನು ವಾರಂಟಿಲ್ಲದೆ ದಸ್ತಗಿರಿ ಮಾಡತಕ್ಕದ್ದು ಮತ್ತು ಅಂಥ ದಸ್ತಗಿರಿಗಾಗಿನ

ಕಾರಣಗಳನ್ನು ಅವನಿಗೆ ತಿಳಿಸತಕ್ಕದ್ದು ಮತ್ತು ಅವನು ಯಾವ ಸಂಸ್ಥೆಯನ್ನು ಬಿಟ್ಟಿದ್ದನೋ ಆ ಸಂಸ್ಥೆಗೆ ಕೂಡಲೇ ಅವನನ್ನು ಸ್ಥಳಾಂತರಿಸತಕ್ಕದ್ದು.

(2) ಸಂಸ್ಥೆಯ ಪ್ರಭಾರದಲ್ಲಿರುವ ಅಧಿಕಾರಿಯು, ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಮಹಾನಗರ ಮ್ಯಾಜಿಸ್ಟ್ರೇಟ್ ಮುಂದೆ, ಅವನನ್ನು ದಸ್ತಗಿರಿಯಾದ ಸ್ಥಳದಿಂದ ಅಂಥ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ಪ್ರಯಾಣ ಮಾಡಲು ಅವಶ್ಯಕವಾದ ಕಾಲವನ್ನು ಹೊರತುಪಡಿಸಿ ಅಂಥ ದಸ್ತಗಿರಿಯಾದ ಇಪ್ಪತ್ತಾಲ್ಕು ಗಂಟೆಗಳ ಅವಧಿಯೊಳಗೆ, ಅವನನ್ನು ಹಾಜರುಪಡಿಸತಕ್ಕದ್ದು ಮತ್ತು ಆ ಮ್ಯಾಜಿಸ್ಟ್ರೇಟನು ಸದರಿ ವ್ಯಕ್ತಿಯು, 15ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದ್ದಾನೆಂದು ಮನದಟ್ಟಾದ ತರುವಾಯ ಎಚ್ಚರಿಕೆಯನ್ನು ಕೊಟ್ಟು ಅವನನ್ನು ಆ ಸಂಸ್ಥೆಗೆ ವಶಾವಣೆ ಮಾಡಬೇಕೆಂದು ಆದೇಶ ಕೊಡತಕ್ಕದ್ದು.

(3) (1)ನೇ ಉಪ-ಪ್ರಕರಣದ ಉಪಬಂಧನಗಳ ಮೇರೆಗೆ ವ್ಯವಹರಿಸಲಾದ ಯಾವನೇ ವ್ಯಕ್ತಿಯು 15ನೇ ಪ್ರಕರಣದ ಮೇರೆಗೆ ಅವನು ಬಿಡುಗಡೆಯಾದ ತರುವಾಯ ಪರಾರಿಯಾಗುವ ಅಥವಾ ಭಿಕ್ಷಾಟನೆಯನ್ನು ಅವಲಂಬಿಸುವವನನ್ನು ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಮಹಾನಗರ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸತಕ್ಕದ್ದು ಮತ್ತು ಅವನು ಕ್ಷಿಪ್ರ ಅಧಿವಿಚಾರಣೆಯ ತರುವಾಯ ಅವನನ್ನು ಅಪರಾಧಿ ಎಂದು ನಿರ್ಣಯಿಸಬಹುದು ಮತ್ತು ಮೂರು ತಿಂಗಳುಗಳಿಗೆ ಮೀರದ ಅವಧಿಗಾಗಿ ಅವನಿಗೆ ಕಾರಾವಾಸ ಶಿಕ್ಷೆಯನ್ನು ವಿಧಿಸತಕ್ಕದ್ದು.

**17. ದುಷ್ಪ್ರೇರಕರನ್ನು ಕಾರಾವಾಸದಿಂದ ಅಥವಾ ಜುಲ್ಮಾನೆ ಅಥವಾ ಅವೆರಡರಿಂದಲೂ ದಂಡಿಸತಕ್ಕದ್ದು.-** ಯಾವನೇ ವ್ಯಕ್ತಿಯನ್ನು ಭಿಕ್ಷೆ ಬೇಡುವುದಕ್ಕಾಗಿ ನಿಯೋಜಿಸಿಕೊಳ್ಳುವ ಅಥವಾ ನಿಯೋಜನೆಯನ್ನು ದುಷ್ಪ್ರೇರಿಸುವ ಯಾರೇ ಆಗಲಿ ಮ್ಯಾಜಿಸ್ಟ್ರೇಟನಿಂದ ಅಪರಾಧಿ ಎಂದು ನಿರ್ಣೀತನಾದ ಮೇಲೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಸಾದಾ ಅಥವಾ ಕಠಿಣ ಕಾರಾವಾಸದಿಂದ ಅಥವಾ ಮೂರು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**18. ಸಂಸ್ಥೆಗೆ ಅಥವಾ ಮ್ಯಾಜಿಸ್ಟ್ರೇಟನ ಬಳಿಗೆ ಹೋಗಲು ಭಿಕ್ಷುಕನು ನಿರಾಕರಿಸಿದರೆ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದು.-** ಈ ಅಧಿನಿಯಮದ ಮೇರೆಗೆ ಅಗತ್ಯಪಡಿಸಿದಾಗ ಪೊಲೀಸ್ ಅಧಿಕಾರಿ ಅಥವಾ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯೊಂದಿಗೆ ಹೋಗಲು ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗಲು ಅಥವಾ ಸಂಸ್ಥೆಗೆ ತೆಗೆದುಕೊಂಡು ಹೋಗಲು ನಿರಾಕರಿಸುವ ಅಥವಾ ತಪ್ಪುವ ಯಾವನೇ ಭಿಕ್ಷುಕನನ್ನು ಮ್ಯಾಜಿಸ್ಟ್ರೇಟನು ಅಪರಾಧಿಯೆಂದು ನಿರ್ಣಯಿಸಿದ ಮೇಲೆ ಒಂದು ತಿಂಗಳಿಗೆ ವಿಸ್ತರಿಸಬಹುದಾದಂಥ ಅವಧಿಗಾಗಿ ಸಾದಾ ಕಾರಾವಾಸದಿಂದ ಅಥವಾ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಭಿಕ್ಷುಕನು ದಂಡಿತನಾಗತಕ್ಕದ್ದು.

## ಅಧ್ಯಾಯ - VII
## ಸಂಕೀರ್ಣ

**19. ಒಂದು ಸಂಸ್ಥೆಯಿಂದ ಇನ್ನೊಂದು ಸಂಸ್ಥೆಗೆ ವರ್ಗಾವಣೆ.-** [1][ಕೇಂದ್ರಿಯ ಪರಿಹಾರ ಸಮಿತಿಯ ಅಧ್ಯಕ್ಷನು][1] ಸ್ವೀಕರಣ ಕೇಂದ್ರ ಅಥವಾ ಪರಿಹಾರ ಕೇಂದ್ರದಲ್ಲಿ ಅಥವಾ ಯಾವುದೇ ಇತರ ಸಂಸ್ಥೆಯಲ್ಲಿ ಬಂಧಿಸಿಟ್ಟ ಯಾವನೇ ವ್ಯಕ್ತಿಯನ್ನು ಅಲ್ಲಿಂದ ರಾಜ್ಯದಲ್ಲಿರುವ ಅಂಥದೇ ಸ್ವರೂಪದ ಇನ್ನೊಂದು ಸ್ವೀಕರಣ ಕೇಂದ್ರ, ಪರಿಹಾರ ಕೇಂದ್ರ ಅಥವಾ ಸಂಸ್ಥೆಗೆ ವರ್ಗಾಯಿಸಬೇಕೆಂದು ನಿರ್ದೇಶಿಸಬಹುದು:

ಪರಂತು, ಅಂಥ ವ್ಯಕ್ತಿಯ ಬಂಧನದ ಒಟ್ಟು ಅವಧಿಯು ಯಾವುದೇ ಸಂದರ್ಭದಲ್ಲಿ ಅಂಥ ವರ್ಗಾವಣೆಯಿಂದ ಹೆಚ್ಚಿಗೆಯಾಗತಕ್ಕುದಲ್ಲ.

1. 1988ರ 12ನೇ ಅಧಿನಿಯಮ ಮೂಲಕ ದಿನಾಂಕ 11.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**20. ಭಿಕ್ಷುಕರ ತಾತ್ಕಾಲಿಕ ಬಿಡುಗಡೆ.-** (1) ಸರ್ಕಾರ ಅಥವಾ ಈ ಬಗ್ಗೆ ಸರ್ಕಾರವು ಅದರ ಅಧಿಕಾರವನ್ನು ಪ್ರತ್ಯಾಯೋಜಿಸಬಹುದಾದಂಥ ಯಾವನೇ ಪ್ರಾಧಿಕಾರಿಯು ನಿಯಮಿತಸಬಹುದಾದಂಥ ಷರತ್ತುಗಳಿಗೊಳಪಟ್ಟು, ಭಿಕ್ಷುಕನ ಕುಟುಂಬದ ಯಾವನೇ ಸದಸ್ಯನ ಅಥವಾ ಅವನ ಅತಿ ಸಮೀಪದ ಯಾವನೇ ಬಂಧುವಿನ ಯಾವುದೇ ತೀವ್ರ ಅನಾರೋಗ್ಯ, ಅಥವಾ ಮರಣದ ಸಂದರ್ಭದಲ್ಲಿ ಅಥವಾ ಯಾವುದೇ ಇತರ ಸಾಕಷ್ಟು ಕಾರಣಕ್ಕಾಗಿ, ಪರಿಹಾರ ಕೇಂದ್ರದಲ್ಲಿ ಬಂಧನದಲ್ಲಿಟ್ಟ ಯಾವನೇ ಭಿಕ್ಷುಕನನ್ನು ಅದು ಅವಶ್ಯವೆಂದು ಭಾವಿಸುವಂಥ ಅವಧಿಗಾಗಿ ಪೆರೋಲಿನ ಮೇಲೆ ಬಿಡುಗಡೆ ಮಾಡಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಭಿಕ್ಷುಕನ ಬಿಡುಗಡೆಯ ಅವಧಿಯನ್ನು ಪರಿಹಾರ ಕೇಂದ್ರದಲ್ಲಿ ಅವನ ಬಂಧನದ ಒಟ್ಟು ಅವಧಿಯ ಬಗ್ಗೆ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕುದಲ್ಲ.

**21. ಬೇಷರತ್ತಾಗಿ ಭಿಕ್ಷುಕರ ಬಿಡುಗಡೆ.-** ಪರಿಹಾರ ಕೇಂದ್ರದಲ್ಲಿ ಭಿಕ್ಷುಕನನ್ನು ಬಂಧಿಸಿಟ್ಟಂಥ ದಿನಾಂಕದಿಂದ ಮೂರು ತಿಂಗಳುಗಳು ಮುಕ್ತಾಯವಾದ ತರುವಾಯ ಯಾವುದೇ ಕಾಲದಲ್ಲಿ ಅಂಥ ಪರಿಹಾರ ಕೇಂದ್ರ ಪ್ರಭಾರದಲ್ಲಿರುವ ಅಧಿಕಾರಿಗೆ ಅವನ ಬಂಧನದ ಅವಧಿಯಲ್ಲಿ ಅಂಥ ಕೇಂದ್ರದಲ್ಲಿ ಅಂಥ ಭಿಕ್ಷುಕನ ವರ್ತನೆಯಿಂದ ಅಂಥ ವ್ಯಕ್ತಿಯು ಭಿಕ್ಷೆ ಬೇಡುವುದನ್ನು ನಿಲ್ಲಿಸುವ ಸಾಧ್ಯತೆ ಇದೆ ಎಂದು ಮನದಟ್ಟಾದರೆ ಅವನು ಸರ್ಕಾರಕ್ಕೆ ಅವನನ್ನು ಬೇಷರತ್ತಾಗಿ ಬಿಡುಗಡೆ ಮಾಡಬಹುದೆಂದು ಶಿಫಾರಸ್ಸು ಮಾಡಬಹುದು ಮತ್ತು ಸರ್ಕಾರವು ಬೇಷರತ್ತಾಗಿ ಅಂಥ ವ್ಯಕ್ತಿಯನ್ನು ಬಿಡುಗಡೆ ಮಾಡಲು ಆದೇಶಿಸಬಹುದು ಮತ್ತು ಆ ತರುವಾಯ ಅಂಥ ವ್ಯಕ್ತಿಯನ್ನು ಪರಿಹಾರ ಕೇಂದ್ರದಲ್ಲಿ ಯಾವ ಅವಧಿಗಾಗಿ ಬಂಧನದಲ್ಲಿಡಬೇಕೆಂದು ಆದೇಶವನ್ನು ಮಾಡಲಾಗಿತ್ತೋ ಆ ಅವಧಿಯು ಮುಕ್ತಾಯವಾಗಿರುವುದಾಗಿ ಭಾವಿಸತಕ್ಕದ್ದು.

**22. ರಾಜ್ಯದಲ್ಲಿನ ಪರಿಹಾರ ಕೇಂದ್ರಗಳಿಂದ ಭಾರತದ ಇತರ ರಾಜ್ಯಗಳಲ್ಲಿರುವ ಅಂಥದೇ ಸ್ವರೂಪದ ಸಂಸ್ಥೆಗಳ ನಡುವೆ ವರ್ಗಾವಣೆ.-** (1) ಸರ್ಕಾರವು ಪರಿಹಾರ ಕೇಂದ್ರದ ಪ್ರಭಾರದಲ್ಲಿರುವ ಅಧಿಕಾರಿಯೊಂದಿಗೆ ಸಮಾಲೋಚಿಸಿ ಪರಿಹಾರ ಕೇಂದ್ರ ಅಥವಾ ಅದೇ ಸ್ವರೂಪದ ಸಂಸ್ಥೆಯಲ್ಲಿ ಬಂಧನದಲ್ಲಿಡಬೇಕೆಂದು ಅವನನ್ನು ನಿರ್ದೇಶಿಸುವ ಈ ಅಧಿನಿಯಮದ ಸ್ವರೂಪದ ಆದೇಶವನ್ನು ಭಾರತದಲ್ಲಿನ ಯಾವುದೇ ಇತರ ರಾಜ್ಯದಲ್ಲಿ ಸಕ್ಷಮ ಪ್ರಾಧಿಕಾರಿಯು ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಬಂಧನದ ಆದೇಶವನ್ನು ಮಾಡಿರುವನೋ ಆ ವ್ಯಕ್ತಿಯನ್ನು ಆ ಪರಿಹಾರ ಕೇಂದ್ರಕ್ಕೆ ವರ್ಗಾವಣೆ ಮಾಡಲು

ಆದೇಶಿಸಬಹುದು ಮತ್ತು ಅಂಥ ವರ್ಗಾವಣೆಯಾದ ಮೇಲೆ ಈ ಅಧಿನಿಯಮದ ಉಪಬಂಧಗಳು, ಅಂಥ ವ್ಯಕ್ತಿಗೆ ಕರ್ನಾಟಕ ರಾಜ್ಯದಲ್ಲಿ ಸಕ್ಷಮ ನ್ಯಾಯಾಲಯವು ಅಂಥ ಪರಿಹಾರ ಕೇಂದ್ರದಲ್ಲಿ ಅವನನ್ನು ಈ ಅಧಿನಿಯಮದ ಮೇರೆಗೆ ಬಂಧಿಸಿಡಲು ನಿರ್ದೇಶಿಸಲಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(2) [1][ಕೇಂದ್ರಿಯ ಪರಿಹಾರ ಸಮಿತಿ ಅಧ್ಯಕ್ಷನು][1] ಸರ್ಕಾರವು ರಾಜ್ಯದಲ್ಲಿನ ಪರಿಹಾರ ಕೇಂದ್ರದಲ್ಲಿ ಬಂಧಿಸಿಟ್ಟ ಯಾವನೇ ವ್ಯಕ್ತಿಯನ್ನು, ಅಲ್ಲಿಂದ ಭಾರತದಲ್ಲಿನ ಯಾವುದೇ ಇತರ ರಾಜ್ಯದಲ್ಲಿರುವ ಅದೇ ಸ್ವರೂಪದ ಸಂಸ್ಥೆಗೆ ಆ ರಾಜ್ಯದಲ್ಲಿ ಜಾರಿಯಲ್ಲಿರುವ ಈ ಅಧಿನಿಯಮದಂಥದೇ ಆದ ಕಾನೂನಿನ ಉಪಬಂಧಗಳ ಮೇರೆಗೆ ಅದರಲ್ಲಿ ಬಂಧಿಸಿಡಲು ನಿರ್ದೇಶಿಸಬಹುದು:

ಪರಂತು, ಯಾವನೇ ವ್ಯಕ್ತಿಯನ್ನು ಈ ಪ್ರಕರಣದ ಮೇರೆಗೆ ಇತರ ಯಾವುದೇ ರಾಜ್ಯಕ್ಕೆ ಅಂಥ ರಾಜ್ಯ ಸರ್ಕಾರದ ಸಮ್ಮತಿ ಇಲ್ಲದೆ ವರ್ಗಾಯಿಸತಕ್ಕುದಲ್ಲ.

1. 1988ರ 12ನೇ ಅಧಿನಿಯಮದ ಮೂಲಕ ದಿನಾಂಕ 11.5.1988 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**23. ಈ ಅಧಿನಿಯಮದ ಮೇರೆಗಿನ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು.-** ಈ ಅಧಿನಿಯಮದ ಮೇರೆಗೆ ಎಲ್ಲಾ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು.

**24. ಜುಲ್ಮಾನೆಗಳು.-** ಈ ಅಧಿನಿಯಮದ ಮೇರೆಗಿನ ವಸೂಲು ಮಾಡಲಾದ ಜಲ್ಮಾನೆಗಳನ್ನು ಕೇಂದ್ರ ಪರಿಹಾರ ನಿಧಿಗೆ ಜಮೆ ಮಾಡತಕ್ಕದ್ದು.

**25. ಈ ಅಧಿನಿಯಮದ ಮೇರೆಗಿನ ಪ್ರಕರಣಗಳಿಗೆ ಆದ್ಯತೆ.-** ದಂಡಪ್ರಕ್ರಿಯಾ ಸಂಹಿತೆಯ 1973 (ಕೇಂದ್ರಾಧಿನಿಯಮ, 1974ರ ಸಂಖ್ಯೆ 2) ಇದರಲ್ಲಿ ಏನೇ ಅಡಕವಾಗಿದ್ದಾಗ್ಯೂವ, ಪ್ರತಿಯೊಂದು ನ್ಯಾಯಾಲಯವು ಸಾಧ್ಯವಾದಷ್ಟು ಮಟ್ಟಿಗೆ ಅಂಥ ನ್ಯಾಯಾಲಯದ ಮುಂದಿರುವ ಯಾವುವೇ ಇತರ ವ್ಯವಹರಣೆಗಳಿಗಿಂತ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಗೆ ಅಗ್ರತೆಯನ್ನು ಕೊಡತಕ್ಕದ್ದು.

**26. ಸ್ವತ್ತನ್ನು ಅರ್ಜಿಸುವ ಅಧಿಕಾರ ಇತ್ಯಾದಿ.-** ಈ ಬಗ್ಗೆ ರಚಿಸಲಾದ ನಿಯಮಗಳಿಗೊಳಪಟ್ಟು ಕೇಂದ್ರ ಪರಿಹಾರ ಸಮಿತಿ ಅಥವಾ ಯಾವುದೇ ಸ್ಥಳೀಯ ಸಮಿತಿಯು ಸ್ವತ್ತನ್ನು ಅರ್ಜಿಸಲು ಕರಾರುಗಳನ್ನು ಮಾಡಿಕೊಳ್ಳಲು, ಕಾನೂನು ವ್ಯವಹರಣೆಗಳನ್ನು ಹೂಡಲು ಹಾಗೂ ಪ್ರತಿವಾದಿಸಲು ಮತ್ತು ಅದಕ್ಕೆ ಪ್ರಾಸಂಗಿಕವಾದ ಇತರ ಎಲ್ಲಾ ಕಾರ್ಯಗಳನ್ನು ಮಾಡಲು ಅಧಿಕಾರವನ್ನು ಹೊಂದಿರತಕ್ಕದ್ದು.

**27. ಅಧಿಕಾರಿಗಳ ನೇಮಕಾತಿ.-** ಕೇಂದ್ರ ಪರಿಹಾರ ಸಮಿತಿ ಅಥವಾ ಕೇಂದ್ರ ಪರಿಹಾರ ಸಮಿತಿಯ ಪೂರ್ವ ಮಂಜೂರಾತಿಯೊಂದಿಗೆ ಸ್ಥಳೀಯ ಸಮಿತಿಗಳು ಆ ಬಗ್ಗೆ ನಿಯಮಿಸಿದ ನಿಯಮಗಳಿಗನುಸಾರವಾಗಿ ಅಧಿನಿಯಮದ ಉದ್ದೇಶಕ್ಕಾಗಿ ಅಧಿಕಾರಿಗಳನ್ನು ನೇಮಕ ಮಾಡಬಹುದು.

**28. ಅಧಿಕಾರಿಗಳ ಸಂರಕ್ಷಣೆ.-** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾವನೇ ವ್ಯಕ್ತಿಯ

ವಿರುದ್ಧ ಯಾವುದೇ ದಾವೆಯನ್ನು ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

**29. ಸಾರ್ವಜನಿಕ ನೌಕರ.-** ಈ ಅಧಿನಿಯಮದ ಮೇರೆಗೆ ಯಾವುದೇ ಪ್ರಕಾರ್ಯವನ್ನು ನೆರವೇರಿಸಲು ಶಕ್ತಗೊಂಡ ಪ್ರತಿಯೊಬ್ಬ ವ್ಯಕ್ತಿಯನ್ನು ಭಾರತ ದಂಡ ಸಂಹಿತೆಯ (ಕೇಂದ್ರಾಧಿನಿಯಮದ, 1860 XLV) 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಸಾರ್ವಜನಿಕ ನೌಕರನೆಂದು ಭಾವಿಸತಕ್ಕದ್ದು.

**30. ಕೇಂದ್ರ ಪರಿಹಾರ ನಿಧಿ.-** [1][(1)][1] ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಕೇಂದ್ರ ಪರಿಹಾರ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ರಚಿಸತಕ್ಕದ್ದು. ಈ ನಿಧಿಯು,-

(i) ಚಂದಾ ಮತ್ತು ದೇಣಿಗೆಗಳನ್ನು:

(ii) ಸರ್ಕಾರದಿಂದ ಪಡೆದ ಅನುದಾನಗಳನ್ನು;

(iii) 31ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಸಂದಾಯ ಮಾಡಿದ ಉಪಕರವನ್ನು;

(iv) ಸ್ಥಳೀಯ ನಿಕಾಯ ಮತ್ತು ಇತರ ಖಾಸಗಿ ಅಥವಾ ಸರ್ಕಾರಿ ಸಂಸ್ಥೆಗಳಿಂದ ಪಡೆದ ಅನುದಾನಗಳನ್ನು;

(v) ಈ ಅಧಿನಿಯಮದ ಮೇರೆಗೆ ವಸೂಲು ಮಾಡಿದ ಜುಲ್ಮಾನೆಗಳನ್ನು; ಮತ್ತು;

(vi) ಇತರ ಮೂಲಗಳಿಂದ ಪಡೆದ ಜಮೆಗಳನ್ನು ಒಳಗೊಂಡಿರತಕ್ಕದು.

1.1982ರ 7ನೇ ಅಧಿನಿಯಮದ ಮೂಲಕ ದಿ. 1.10.1981 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ನೀಡಲಾಗಿದೆ.

[1][(2) ಕೇಂದ್ರ ಪರಿಹಾರ ನಿಧಿಯನ್ನು, ಸಮಿತಿಯ ಅಧ್ಯಕ್ಷನಾಗಿರತಕ್ಕ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಮತ್ತು ಅದರ ಸದಸ್ಯರಾಗಿರತಕ್ಕ ಸಮಾಜ ಕಲ್ಯಾಣ ನಿರ್ದೇಶಕ, ಸರ್ಕಾರದಿಂದ ನಾಮನಿರ್ದೇಶಿತಗೊಂಡ ಹಣಕಾಸು ಇಲಾಖೆಯ ಪ್ರತಿನಿಧಿಯನ್ನು ಒಳಗೊಂಡ ಸಮಿತಿಯು ಆಡಳಿತ ನಿರ್ವಹಿಸತಕ್ಕದ್ದು.

(3) ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಕಾಲಕಾಲಕ್ಕೆ (2)ನೇ ಉಪ-ಪ್ರಕರಣದ ಮೇರೆಗೆ ರಚಿಸಿದ ಸಮಿತಿಯು ತೀರ್ಮಾನಿಸಬಹುದಾದಂಥ ಉದ್ದೇಶಗಳಿಗಾಗಿ ಮತ್ತು ಅಂಥ ರೀತಿಯಲ್ಲಿ ಕೇಂದ್ರ ಪರಿಹಾರ ನಿಧಿಯನ್ನು ವಿನಿಯೋಗಿಸಕತಕ್ಕದ್ದು.][1]

1.1982ರ 7ನೇ ಅಧಿನಿಯಮದ ಮೂಲಕ ದಿ. 1.10.1981ರಿಂದ ಜಾರಿಗೆ ಬರುವಂತೆ (2) ಮತ್ತು (3)ನೇ ಉಪ ಪ್ರಕರಣಗಳನ್ನು ಸೇರಿಸಲಾಗಿದೆ.

**31. ಭಿಕ್ಷಾಟನೆ ಉಪಕರ.-** (1) ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುತ್ತವೆ,-

(i) ಭೂಮಿಗಳು ಮತ್ತು ಕಟ್ಟಡಗಳ ಮೇಲೆ;

(ii) ಸ್ಥಳೀಯ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ, ಅದರೊಳಗೆ ಬರುವ ಸರಕುಗಳ ಪ್ರವೇಶದ ಮೇಲಿನ ತೆರಿಗೆ;

(iii) ವಾಹನಗಳ ಮೇಲಣ ತೆರಿಗೆ;

(iv) ವೃತ್ತಿಗಳು, ವ್ಯಾಪಾರಗಳು, ಅಜೀವಿಕೆಗಳು ಮತ್ತು ನಿಯೋಜನೆಗಳ ಮೇಲಿನ ತೆರಿಗೆ ಇವುಗಳ ಮೇಲೆ ಅಧಿಭಾರದ ರೂಪದಲ್ಲಿ ಭಿಕ್ಷಾಟನಾ ಉಪಕರವನ್ನು ಅಂಥ ತೆರಿಗೆಗಳನ್ನು ವಿಧಿಸುವುದಕ್ಕೆ ಸಂಬಂಧಪಟ್ಟ ಕಾನೂನುಗಳ ಮೇರೆಗೆ ಪ್ರತಿಯೊಂದು ಸ್ಥಳೀಯ

ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿನ ಪ್ರದೇಶದಲ್ಲಿ ಹಾಗೆ ವಿಧಿಸಲಾದ ತೆರಿಗೆಗಳ ಪ್ರತಿಯೊಂದು ರೂಪಾಯಿಗಾಗಿ ಮೂರು ಪೈಸೆಯ ದರದಲ್ಲಿ ವಿಧಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಮೇರೆಗೆ ವಿಧಿಸಿದ ಉಪಕರವನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವು ಆ ಉಪಕರವು ತತ್ಕಾಲದಲ್ಲಿ ಜಾರಿಯಲ್ಲಿರುವ ಸಂಬಂಧಪಟ್ಟ ಕಾನೂನುಗಳ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಯಾಗಿದ್ದಿದ್ದರೆ ಹೇಗೋ ಹಾಗೆ ಅದನ್ನು ಸಂಗ್ರಹಿಸತಕ್ಕದ್ದು ಮತ್ತು ಸದರಿ ತೆರಿಗೆಯನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಸಂಬಂಧಪಟ್ಟ ಸದರಿ ಕಾನೂನುಗಳ ಉಪಬಂಧಗಳು ನಿಯಮಿಸಬಹುದಾದಂಥ ಮಾರ್ಪಾಟುಗಳಿಗೊಳಪಟ್ಟು ಅಂಥ ಉಪಕರವನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು.

(3) ಸ್ಥಳೀಯ ಪ್ರಾಧಿಕಾರವು (2)ನೇ ಉಪಪ್ರಕರಣದ ಮೇರೆಗೆ ಸಂಗ್ರಹಿಸಿದ ಮೊಬಲಗಿನ ಶೇಕಡಾ ಹತ್ತರಷ್ಟನ್ನು ಸಂಗ್ರಹಣದ ಖರ್ಚೆಂದು ಕಳೆದುಕೊಳ್ಳಲು ಹಕ್ಕುಳ್ಳದ್ದಾಗಿರತಕ್ಕದ್ದು ಮತ್ತು ಶಿಲ್ಕನ್ನು ಸರ್ಕಾರವು ನಿರ್ದೇಶಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ [1][30ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ರಚಿಸಿದ ಸಮಿತಿಗೆ ][1] ಸಂದಾಯ ಮಾಡತಕ್ಕದ್ದು.

1. 1982ರ ಅಧಿನಿಯಮ 87ರ ಮೂಲಕ ದಿನಾಂಕ 1.10.1981ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಿದೆ.

[2][(4) (3)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು ನಿರ್ದೇಶಿಸಿದ ಸಮಯದೊಳಗಾಗಿ ಅಂಥ ಶಿಲ್ಕನ್ನು ಪಾವತಿ ಮಾಡಲು ಸ್ಥಳೀಯ ಪ್ರಾಧಿಕಾರವು ವಿಫಲವಾದರೆ, ಸರ್ಕಾರವು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಯನ್ನು ಅಂಥ ಶಿಲ್ಕಿನ ಮೊತ್ತವನ್ನು ಅಂಥ ನಿಧಿಯ ಎದುರಾಗಿರುವ ಅಂಥ ವ್ಯಕ್ತಿಯು ಯಾವುದೇ ದರಕ್ಕೆ ಆದ್ಯತೆಯಾಗಿ ಮತ್ತು ಅಂಥ ನಿಧಿಯ ಜಮೆಗೆ ಮೊತ್ತಗಳನ್ನು ಹೊಂದಿಸುವಷ್ಟರ ಮಟ್ಟಿಗೆ ಆದೇಶವನ್ನು ಪಾಲಿಸಲು ಬದ್ಧವಾಗತಕ್ಕದ್ದನ್ನು ನಿರ್ದೇಶಿಸಿ ಆದೇಶವನ್ನು ಹೊರಡಿಸಬಹುದು.

(5) (4)ನೇ ಉಪಪ್ರಕರಣದ ಅಡಿಯಲ್ಲಿನ ಸರ್ಕಾರದ ಆದೇಶವನ್ನು ಪಾಲಿಸುವಲ್ಲಿ ಸ್ಥಳೀಯ ಪ್ರಾಧಿಕಾರದಿಂದ ಬಾಕಿಯಿರುವ ಶಿಲ್ಕಿನ ಮೊತ್ತವನ್ನು ಭೂ ಕಂದಾಯ ಜಾರಿಯ ಅದೇ ವಿಧಾನದಲ್ಲಿ ಅಂಥ ಸ್ಥಳೀಯ ಪ್ರಾಧಿಕಾರದಿಂದ ವಸೂಲು ಮಾಡತಕ್ಕದ್ದು ಮತ್ತು ಹಾಗೆ ವಸೂಲು ಮಾಡಿದ ಮೊತ್ತವನ್ನು ಕೇಂದ್ರ ಪರಿಹಾರ ನಿಧಿಗೆ ಜಮೆ ಮಾಡತಕ್ಕದ್ದು.][2]

2. 2003ರ ಅಧಿನಿಯಮ 26ರ ಮೂಲಕ (4) ಮತ್ತು (5) ಉಪಪ್ರಕರಣಗಳನ್ನು ದಿನಾಂಕ 21.05.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**32. ಸಂದರ್ಶಕರ ಮಂಡಲಿ.-** ಸರ್ಕಾರವು ಈ ಬಗ್ಗೆ ರಚಿಸಿದ ನಿಯಮಗಳಿಗನುಸಾರವಾಗಿ ಸ್ಥಳೀಯ ಪ್ರದೇಶಗಳಲ್ಲಿ ಅದರಲ್ಲಿರುವ ಸಂಸ್ಥೆಗಳನ್ನು ಕಾಲಕಾಲಕ್ಕೆ ಪರಿಶೀಲಿಸಲು ಮತ್ತು ಈ ಸಂಸ್ಥೆಗಳ ಕೆಲಸದ ಬಗ್ಗೆ ಸರ್ಕಾರಕ್ಕೆ ವರದಿ ಮಾಡಲು ಮತ್ತು ಸದರಿ ಸಂಸ್ಥೆಗಳ ಸುಧಾರಣೆಗಾಗಿ ಅವರು ಸೂಕ್ತವೆಂದು ಭಾವಿಸುವಂಥ ಸಲಹೆಗಳನ್ನು ಕೊಡಲು ಸಂದರ್ಶಕರ ಮಂಡಲಿಯನ್ನು ನೇಮಿಸಬಹುದು.

**33. ಪುನರೀಕ್ಷಣೆ.-** ದಂಡ ಪ್ರಕ್ರಿಯಾ ಸಂಹಿತೆಯ 1973ರಲ್ಲಿ (ಕೇಂದ್ರಾಧಿನಿಯಮ, 1974ರ 2) ತದ್ವಿರುದ್ಧವಾಗಿ ಏನೇ ಅಡಕವಾಗಿದ್ದರೂ, ಈ ಅಧಿನಿಯಮದ ಮೇರೆಗೆ ಮ್ಯಾಜಿಸ್ಟ್ರೇಟನ ತೀರ್ಮಾನದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಧಿಕಾರ

ವ್ಯಾಪ್ತಿಯನ್ನು ಹೊಂದಿರುವ ಸೆಷನ್ಸ್ ನ್ಯಾಯಾಲಯಕ್ಕೆ ಅಂಥ ತೀರ್ಮಾನದ ಪುನರೀಕ್ಷಣೆಗಾಗಿ ನಿಯಮಿಸಿದ ರೀತಿಯಲ್ಲಿ ಮತ್ತು ನಿಯಮಿಸಿದ ಕಾಲದೊಳಗೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಹಾಗೆ ಮಾಡುವಾಗ ಸೆಷನ್ಸ್ ನ್ಯಾಯಾಲಯವು ಮ್ಯಾಜಿಸ್ಟ್ರೇಟನ ಮುಂದೆ ಇದ್ದ ವ್ಯವಹರಣೆಗಳ ಕಾನೂನು ಸಮ್ಮತತೆ ಮತ್ತು ಔಚಿತ್ಯವನ್ನು ಪರೀಕ್ಷಿಸಬಹುದು.

**34. ಅಪೀಲು.-** ಸಂಸ್ಥೆಯಲ್ಲಿ ಯಾವನೇ ನಿವಾಸಿಯು ಸಂಸ್ಥೆಯ ಪ್ರಭಾರದಲ್ಲಿರುವ ಯಾವನೇ ವ್ಯಕ್ತಿಯು ಮಾಡಿದ ಯಾವುದೇ ಆದೇಶದಿಂದ ಭಾಧಿತನಾಗಿದ್ದರೆ ಅವನು ಆ ಆದೇಶದ ವಿರುದ್ಧ ಸ್ಥಳೀಯ ಸಮಿತಿಯ ಅಧ್ಯಕ್ಷನಿಗೆ ಅಪೀಲು ಸಲ್ಲಿಸಬಹುದು.

(2) ಸ್ಥಳೀಯ ಸಮಿತಿಯ ಅಧ್ಯಕ್ಷನ ತೀರ್ಮಾನವನ್ನು ಕೇಂದ್ರ ಪರಿಹಾರ ಸಮಿತಿಯು ಅದರ ಸದಸ್ಯರುಗಳಲ್ಲಿ ನಿಯಮಿಸಿದ ರೀತಿಯಲ್ಲಿ ರಚಿಸಿದ ಅಪೀಲು ಮಂಡಲಿಗೆ ಎರಡನೇ ಅಪೀಲನ್ನು ಮಾಡಿಕೊಳ್ಳಬಹುದು ಮತ್ತು ಆ ಮಂಡಲಿಯ ಆದೇಶವು ಅಂತಿಮವಾಗಿರತಕ್ಕದ್ದು.

**35. ದುರ್ನಡತೆಗಾಗಿ ಆಪಾದನೆ.-** ಸರ್ಕಾರವು, ಕೇಂದ್ರ ಪರಿಹಾರ ನಿಧಿಯ ಲೆಕ್ಕಪತ್ರಗಳನ್ನು ಪರಿಶೋಧಿಸುವುದಕ್ಕಾಗಿ ಸರ್ಕಾರವು ನೇಮಕ ಮಾಡಬಹುದಾದ ಲೆಕ್ಕಪರಿಶೋಧಕನ ವರದಿಯ ಮೇಲೆ ವ್ಯಕ್ತಿಯ ಸ್ಪಷ್ಟೀಕರಣವನ್ನು ಪಡೆದುಕೊಂಡ ತರುವಾಯ ದುರ್ನಡತೆ ಅಥವಾ ನಿರ್ಲಕ್ಷತೆಯಿಂದ ಯಾವುದೇ ನಷ್ಟವನ್ನುಂಟು ಮಾಡಿದ್ದಕ್ಕಾಗಿ ಜವಾಬ್ದಾರನಾದ ಯಾವನೇ ವ್ಯಕ್ತಿಯನ್ನು ಆಪಾದಿಸುವ ಆದೇಶವನ್ನು ಮಾಡಬಹುದು ಮತ್ತು ಅಂತ ಪ್ರತಿಯೊಂದು ಪ್ರಕರಣದಲ್ಲಿ ಅಂಥ ವ್ಯಕ್ತಿಯಿಂದ ಬಾಕಿಯಾಗುವ ಮೊಬಲಗನ್ನು ಪ್ರಮಾಣೀಕರಿಸತಕ್ಕದ್ದು ಮತ್ತು ಕೇಂದ್ರ ಪರಿಹಾರ ಸಮಿತಿಯ ಅರ್ಜಿಯ ಮೇಲೆ ಕಂದಾಯ ಪ್ರಾಧಿಕಾರಿಗಳು ಅದು ಭೂ ಕಂದಾಯದ ಬಾಕಿಯಾಗಿದಿದ್ದರೆ ಹೇಗೋ ಹಾಗೆ ಸದರಿ ಮೊಬಲಗನ್ನು ಅಂಥ ವ್ಯಕ್ತಿಯಿಂದ ವಸೂಲು ಮಾಡತಕ್ಕದ್ದು ಮತ್ತು ಅದನ್ನು ಕೇಂದ್ರ ಪರಿಹಾರ ನಿಧಿಗೆ ಜಮೆ ಮಾಡತಕ್ಕದ್ದು.

**36. ವಾರ್ಷಿಕ ಲೆಕ್ಕಪತ್ರಗಳ ಪ್ರಕಟಣೆ.-** ಜಮೆ ಮತ್ತು ವೆಚ್ಚಗಳ ವಾರ್ಷಿಕ ಲೆಕ್ಕಪತ್ರಗಳು ಮತ್ತು ಆಯವ್ಯಯ ಪತ್ರವು ಮಂಜೂರಾದಾಗ ಸಾರ್ವಜನಿಕ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಅದನ್ನು ಪ್ರಕಟಿಸತಕ್ಕದ್ದು;

**37. ಆಡಳಿತ ವರದಿ.-** (1) ಪ್ರತಿವರ್ಷ ಜುಲೈ ಒಂದರ ತರುವಾಯ ಆದಷ್ಟು ಬೇಗನೆ ಮತ್ತು ಸರ್ಕಾರವು ನಿಗದಿಪಡಿಸಿಬಹುದಾದಂಥ ದಿನಾಂಕವನ್ನು ಮೀರದಂತೆ, ಕೇಂದ್ರ ಪರಿಹಾರ ಸಮಿತಿಯು, ಸರ್ಕಾರವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ವಿವರಗಳೊಂದಿಗೆ ಹಿಂದಿನ ಸರ್ಕಾರಿ ವರ್ಷಕ್ಕಾಗಿ ಆಡಳಿತ ವರದಿಯನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು;

(2) ಪ್ರತಿಯೊಂದು ಸ್ಥಳೀಯ ಸಮಿತಿಯು, ಪ್ರತಿವರ್ಷವೂ ಜುಲೈ ಒಂದರ ತರುವಾಯ ಆದಷ್ಟು ಬೇಗನೆ ಮತ್ತು ಕೇಂದ್ರ ಪರಿಹಾರ ಸಮಿತಿಯು ನಿಗದಿಪಡಿಸಬಹುದಾದಂಥ ದಿನಾಂಕವನ್ನು ಮೀರದಂತೆ ಕೇಂದ್ರ ಪರಿಹಾರ ಸಮಿತಿಯು ನಿಗದಿಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ಹಿಂದಿನ ಸರ್ಕಾರಿ ವರ್ಷಕ್ಕಾಗಿ ಆಡಳಿತ ವರದಿಯನ್ನು ಕೇಂದ್ರ ಪರಿಹಾರ ಸಮಿತಿಗೆ ಒಪ್ಪಿಸತಕ್ಕದ್ದು.

(3) ಆ ವರದಿಯನ್ನು ಸರ್ಕಾರವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

## ಅಧ್ಯಾಯ - VIII
## ನಿಯಂತ್ರಣ

**38. ಸರ್ಕಾರದ ಅಧಿಕಾರಗಳು.-** ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು,-

(ಎ) ಕೇಂದ್ರ ಪರಿಹಾರ ಸಮಿತಿಯ ನಿಯಂತ್ರಣ ಅಥವಾ ವ್ಯವಸ್ಥಾಪನೆಯಲ್ಲಿರುವ ಯಾವುದೇ ಸಂಸ್ಥೆಯನ್ನು ಪ್ರವೇಶಿಸಲು ಮತ್ತು ಪರಿಶೀಲಿಸಲು ಅಥವಾ ಅದರ ಅಡಿಯಲ್ಲಿ ಅಥವಾ ಅದರ ನಿರ್ದೇಶನದ ಮೇರೆಗೆ ನಡೆಯುತ್ತಿರುವ ಯಾವುದೇ ಕೆಲಸವನ್ನು ಪರಿಶೀಲಿಸಲು;

(ಬಿ) ಕೇಂದ್ರ ಪರಿಹಾರ ಸಮಿತಿ ಅಥವಾ ನಿಯಂತ್ರಣ ಮತ್ತು ನಿರ್ದೇಶನದಲ್ಲಿರುವ ಯಾವುದೇ ಸಮಿತಿಯ ವ್ಯವರಣೆಗಳಿಂದ ಯಾವುದೇ ಉದ್ಧೃತ ಮತ್ತು ಕೇಂದ್ರ ಪರಿಹಾರ ಸಮಿತಿಯನ್ನು ಒದಗಿಸಲು ಅಗತ್ಯಪಡಿಸಬಹುದಾದಂಥ ಯಾವುದೇ ವಿವರಪಟ್ಟಿಕೆ, ವಿವರಪತ್ರ, ಲೆಕ್ಕಪತ್ರ ಅಥವಾ ವರದಿಯನ್ನು ತರಿಸಿಕೊಳ್ಳಲು;

(ಸಿ) ಕೇಂದ್ರ ಪರಿಹಾರ ಸಮಿತಿಯ ಕಛೇರಿ ಅಥವಾ ಅದರ ನಿಯಂತ್ರಣ ಮತ್ತು ನಿರ್ದೇಶನದಲ್ಲಿರುವ ಯಾವುದೇ ಕಛೇರಿಯನ್ನು ಪರಿಶೀಲಿಸಲು ಮತ್ತು ಯಾವುದೇ ಅಂಥ ಕಛೇರಿಯ ದಾಖಲೆಗಳನ್ನು ತರಿಸಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಧಿಕೃತಗೊಳಿಸಿದ ಅಧಿಕಾರಿಯು ಕೇಂದ್ರ ಪರಿಹಾರ ಸಮಿತಿಯ ಅಥವಾ ಸ್ಥಳೀಯ ಸಮಿತಿಯ ಆದೇಶ ಅಥವಾ ವ್ಯವಹರಣೆಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನು ಅಥವಾ ಆದೇಶಗಳಿಗೆ ತದ್ವಿರುದ್ಧವಾಗಿವೆ ಎಂದು ಅವನಿಗೆ ಮನದಟ್ಟಾದರೆ ಸರ್ಕಾರದ ಆದೇಶಗಳಿಗಾಗಿ ದಾಖಲೆಗಳನ್ನು ಒಪ್ಪಿಸತಕ್ಕದ್ದು.

**39. ವಿವಾದಗಳು.-** ಈ ಅಧಿನಿಯಮದ ಉಪಬಂಧಗಳ ಮೇರೆಗೆ ಉದ್ಭವಿಸುವ ಯಾವುದೇ ವಿಷಯದಲ್ಲಿ ಕೇಂದ್ರ ಪರಿಹಾರ ಸಮಿತಿ ಮತ್ತು ಸ್ಥಳೀಯ ಸಮಿತಿ ಅಥವಾ ಸ್ಥಳೀಯ ನಿಕಾಯಗಳ ನಡುವೆ ಯಾವುದೇ ವಿವಾದ ಉದ್ಭವಿಸಿದರೆ ಮತ್ತು ವಿವಾದವು ಸೌಹಾರ್ದಯುತವಾಗಿ ಇತ್ಯರ್ಥವಾಗದಿದ್ದರೆ ವಿಷಯವನ್ನು ಸರ್ಕಾರಕ್ಕೆ ವರದಿ ಮಾಡತಕ್ಕದ್ದು ಸರ್ಕಾರವು ವಿವಾದವನ್ನು ಅವಗಾಹನೆಗೆ ತೆಗೆದುಕೊಳ್ಳಬಹುದು ಮತ್ತು ಅದನ್ನು ತೀರ್ಮಾನಿಸಬಹುದು ಮತ್ತು ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ವಿವಾದಕ್ಕೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯವು ಯಾವುದೇ ದಾವೆಯನ್ನು ಪುರಸ್ಕರಿಸತಕ್ಕುದಲ್ಲ.

**40. ನಿಯಮಗಳು.-** (1) ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಸಾಮಾನ್ಯವಾಗಿ ನಿಯಮಗಳನ್ನು ರಚಿಸಬಹುದು.

2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,-

(ಎ) ಸಮಿತಿಗಳು ಮತ್ತು ಸಂಸ್ಥೆಗಳ ರಚನೆ ಮತ್ತು ಅವುಗಳ ಅಧಿಕಾರಗಳು ಕರ್ತವ್ಯಗಳು ಮತ್ತು ಪ್ರಕಾರ್ಯಗಳು,

(ಬಿ) ಸಂದರ್ಶಕರ ಮಂಡಲಿಯ ರಚನೆ ಅದರ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು,

(ಸಿ) ಕೇಂದ್ರ ಪರಿಹಾರ ಸಮಿತಿ ಮತ್ತು ಸ್ಥಳೀಯ ಸಮಿತಿಯ ವಿವರ ಪಟ್ಟಿಕೆಗಳು ಮತ್ತು ವಿವರ ಪತ್ರಗಳು ಮತ್ತು ವರದಿಗಳನ್ನು ಒಪ್ಪಿಸುವುದು ಮತ್ತು ವಾರ್ಷಿಕ ಜಮೆಗಳು ಮತ್ತು ವಾರ್ಷಿಕ ಆಡಳಿತ ವರದಿಯನ್ನು ತಯಾರಿಸುವುದು ಮತ್ತು ಒಪ್ಪಿಸುವುದು,

(ಡಿ) ಲೆಕ್ಕಪತ್ರಗಳ ಪರಿಶೋಧನೆ.

(ಇ) ಅಪೀಲು ಮಂಡಲಿಯ ರಚನೆ ಅದರ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು,

(ಎಫ್) ಒಂದು ಸಂಸ್ಥೆಯಿಂದ ಇನ್ನೊಂದಕ್ಕೆ ಮತ್ತು ನಿಯಮಿಸಬಹುದಾದಂಥ ಷರತ್ತುಗಳ ಮೇಲೆ ಒಂದು ರಾಜ್ಯದಿಂದ ಇನ್ನೊಂದಕ್ಕೆ ಭಿಕ್ಷುಕರ ವರ್ಗಾವಣೆ,

(ಜಿ) ಈ ಅಧಿನಿಯಮದ ಉಪಬಂಧಗಳ ಮೇರೆಗೆ ತೆಗೆದುಕೊಳ್ಳಲು ಅಗತ್ಯಪಡಿಸಿದ ಬಂಧಪತ್ರಗಳ ನಮೂನೆಯನ್ನು ನಿಯಮಿಸಬಹುದು, ಮತ್ತು

(ಹೆಚ್) ಈ ಅಧಿನಿಯಮದ ಮೇರೆಗೆ ಯಾವ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಬೇಕೆಂದು ಅಗತ್ಯಪಡಿಸಲಾಗಿದೆಯೋ ಅಥವಾ ರಚಿಸಬಹುದೋ ಆ ಯಾವುದೇ ಇತರ ವಿಷಯ ಇವುಗಳಿಗಾಗಿ ಉಪಬಂಧಿಸಬಹುದು.

(3) ಈ ಅಧಿನಿಯಮದ ಮೇರೆಗೆ ನಿಯಮಗಳನ್ನು ರಚಿಸಲು ಸರ್ಕಾರದ ಅಧಿಕಾರವು ಪೂರ್ವ ಪ್ರಕಟಣೆಯ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(4) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂತ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ನಿಯಮವು ಸರ್ಕಾರವು ಮಾರ್ಪಾಟು ಅಥವಾ ರದ್ದಿಯಾತಿಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸಿದ ದಿನಾಂಕದಿಂದ ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ.

ಆದಾಗ್ಯೂ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಅಂಥ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

(5) ಈ ಅದಿನಿಯಮದ ಮೇರೆಗೆ ಸರ್ಕಾರವು ರಚಿಸಿದ ಎಲ್ಲಾ ನಿಯಮಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಇಂಗ್ಲೀಷ್ ಮತ್ತು ಕನ್ನಡ ಇವೆರಡರಲ್ಲಿ ಪ್ರಕಟಿಸತಕ್ಕದ್ದು.

**41. ನಿರಸನ.-** ಈ ಅಧಿನಿಯಮದ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಿ ಯಾವುದೇ ಅಧಿನಿಯಮವು ಜಾರಿಯಲ್ಲಿರುವಂಥ ಯಾವುದೇ ಪ್ರದೇಶದಲ್ಲಿ ಈ ಅಧಿನಿಯಮವು ಜಾರಿಗೆ ಬರುವಂಥ ದಿನಾಂಕದಂದು ಅಂಥ ಅಧಿನಿಯಮವು ಅಂಥ ಪ್ರದೇಶದಲ್ಲಿ ಅಂಥ ದಿನಾಂಕದಂದು ನಿರಸನಗೊಳ್ಳತಕ್ಕದ್ದು:

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899 (ಕರ್ನಾಟಕ ಅಧಿನಿಯಮ, 1899ರ III) 6ನೇ ಪ್ರಕರಣವು ಅಂಥ ನಿರಸನಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳು ಅಧಿನಿಯಮದ ಮೂಲಕ ಸದರಿ ಅಧಿನಿಯಮಿತಿಗಳು ನಿರಸನಗೊಳಿಸಲಾಗಿದ್ದಿದ್ದರೆ ಮತ್ತು ಪುನಃ ಅಧಿನಿಯಮಿತಗೊಳಿಸಲಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**ಅನುಸೂಚಿ**

1. ಮುಂಬಯಿ ಭಿಕ್ಷುಕರ ಅಧಿನಿಯಮ, 1945 (ಮುಂಬಯಿ ಅಧಿನಿಯಮ, 1945ರ XXIII)

2. ಭಿಕ್ಷಾಟನಾ ಪ್ರತಿಬಂಧಕ ಅಧಿನಿಯಮ, 1350 ಎಫ್ (ಹೈದರಾಬಾದ್ ಅಧಿನಿಯಮ, 1350 ಫಸ್ಲಿ xx)

3. ಮದರಾಸು ಭಿಕ್ಷಾಟನಾ ಪ್ರತಿಬಂಧಕ್ಕೆ ಅಧಿನಿಯಮ, 1945 (ಮದರಾಸು ಅಧಿನಿಯಮ, 1945ರ XIII)

4. ಮೈಸೂರು ಭಿಕ್ಷಾಟನಾ ನಿಷೇಧ ಅಧಿನಿಯಮ, 1944, (ಮೈಸೂರು ಅಧಿನಿಯಮ, 1944ರ 33)

**ಅಧಿಸೂಚನೆ**

**I**

**ಬೆಂಗಳೂರು** , ದಿನಾಂಕ 26ನೇ ಮಾರ್ಚ್ 1976 [ಸಂ. ಎಸ್ಡಬ್ಲ್ಯೂಡಿ 5 ಎಸ್.ಬಿ.ಆರ್. 76]

**ಎಸ್.ಓ.979.-** ಕರ್ನಾಟಕ ಬಿಕ್ಷಾಟನೆ ನಿಷೇಧ ಅಧಿನಿಯಮ, 45ರ (1945ರ ಕರ್ನಾಟಕ ಅಧಿನಿಯಮ 27) 1ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸದರಿ ಅಧಿನಿಯಮವನ್ನು ಬೆಂಗಳೂರು ನಗರ ಪಾಲಿಕೆ ಮತ್ತು ಹುಬ್ಬಳ್ಳಿ ಧಾರವಾಡ ನಗರ ಹಾಗೂ ಮೈಸೂರು, ಮಂಗಳೂರು, ಬೆಳಗಾವಿ, ಗುಲ್ಬರ್ಗಾ, ಬಳ್ಳಾರಿ, ದಾವಣಗೆರೆ, ಬಿಜಾಪುರ ಮತ್ತು ಶಿವಮೊಗ್ಗ ಪುರಸಭೆಗಳು ಒಳಗೊಳ್ಳುವ ಪ್ರದೇಶಗಳಲ್ಲಿ 1976ರ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಈ ಮೂಲಕ ಜಾರಿಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಆದೇಶಾನುಸಾರ

ಸಹಿ/-
(ಎಸ್.ನಾರಾಯಣಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

(ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ IV-2ಸಿ (ii)ರಲ್ಲಿ ದಿನಾಂಕ: 08.04.1976ರಲ್ಲಿ ಪ್ರಕಟಿಸಲಾಗಿದೆ)

## ಅಧಿಸೂಚನೆ
## II

**ಬೆಂಗಳೂರು ದಿನಾಂಕ 28ನೇ ಆಗಸ್ಟ 1997 (ಸಂ.ಎಸ್.ಡಬ್ಲ್ಯೂ.ಡಿ.15 ಎಸ್.ಬಿ.ಆರ್. 97(1)**

**1462 ಎಸ್.ಓ.1397**.- ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ 08ನೇ ಏಪ್ರಿಲ್ 1976ರಲ್ಲಿ ಪ್ರಕಟಿಸಲಾದ ಸರ್ಕಾರದ ಅಧಿಸೂಚನೆ ಸಂ. ಎಸ್.ಡಬ್ಲ್ಯೂಡಿ 5 ಎಸ್.ವಿ.ಆರ್ 76, ದಿನಾಂಕ 26ನೇ ಮಾರ್ಚ್ 1976ರ (ಇಲ್ಲಿ ಇನ್ನು ಮುಂದೆ ಸದರಿ ಅಧಿಸೂಚನೆ ಎಂದು ಉಲ್ಲೇಖಿಸಲಾಗಿದೆ) ಕರ್ನಾಟಕ ಭಿಕ್ಷಾಟನೆ ಅಧಿನಿಯಮ, 1975ರ ಬೆಂಗಳೂರು ನಗರ ಮತ್ತು ಹುಬ್ಬಳ್ಳಿ-ಧಾರವಾಡ ನಗರ ಪಾಲಿಕೆ ಹಾಗೂ ಮೈಸೂರು, ಮಂಗಳೂರು, ಬೆಳಗಾವಿ, ಗುಲ್ಬರ್ಗಾ, ಬಳ್ಳಾರಿ, ದಾವಣಗೆರೆ, ಬಿಜಾಪುರ ಮತ್ತು ಶಿವಮೊಗ್ಗ ಪೌರಸಭೆಗಳು ಒಳಗೊಳ್ಳುವ ಪ್ರದೇಶಗಳ್ಲಿ 1ನೇ ಏಪ್ರಿಲ್ 1976ರಿಂದ ಜಾರಿಗೊಳಿಸಲಾಗಿದೆ.

ಕರ್ನಾಟಕ ಸರ್ಕಾರವು ಇಡೀ ಕರ್ನಾಟಕ ರಾಜ್ಯದಲ್ಲಿನ ಭಿಕ್ಷುಕರ ಪರಿಹಾರಕ್ಕಾಗಿ ಸೂಕ್ತ ಸೌಕರ್ಯಗಳು ಒದಗಿಬರಲಿ ಎಂದು ಮನಗಂಡಿರುವುದರಿಂದ.

ಆದ್ದರಿಂದ ಈಗ, ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975ರ (1975ರ ಕರ್ನಾಟಕ ಅಧಿನಿಯಮ 27) 1ನೇ ಪ್ರಕರಣದ (3)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಸದರಿ ಅಧಿಸೂಚನೆಯನ್ನು ಭಾಗಶ: ಮಾರ್ಪಾಡಿಸಿ, ಸದರಿ ಅಧಿನಿಯಮದ ಉಪಬಂಧಗಳನ್ನು ಕರ್ನಾಟಕ ರಾಜ್ಯದ ಉಳಿದ ಪ್ರದೇಶಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಸರ್ಕಾರವು ಈ ಮೂಲಕ ಜಾರಿಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಆದೇಶಾನುಸಾರವಾಗಿ

ಸಹಿ/-
(ಬಿ.ಡಿ. ಓಬಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

(ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ IV-2ಸಿ (ii)ರಲ್ಲಿ ದಿನಾಂಕ: 06.11.1997ರಲ್ಲಿ ಪ್ರಕಟಿಸಲಾಗಿದೆ)

*************

**2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 43**

(ಕರ್ನಾಟಕ ರಾಜ್ಯ ಪತ್ರದಲ್ಲಿ (ವಿಶೇಷ) ದಿನಾಂಕ: 19.10.2020ರಂದು ಪ್ರಕಟಿಸಲಾಗಿದೆ.)

**ಕರ್ನಾಟಕ ಭಿಕ್ಷಾಟನೆ ನಿಷೇಧ (ತಿದ್ದುಪಡಿ) ಅಧಿನಿಯಮ, 2020**

(ದಿನಾಂಕ: 19.10.2020ರಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ.)

ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975ನ್ನು (1975ರ ಕರ್ನಾಟಕ ಅಧಿನಿಯಮ 27) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭಿಕ್ಷಾಟನೆ ನಿಷೇಧ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

14ನೇ ಪ್ರಕರಣವನ್ನು ಮೂಲ ಅಧಿನಿಯಮಕ್ಕೆ ಸೇರಿಸಲಾಗಿದೆ.

The above translation of the Karnataka Prohibition of Beggary Act, 1975 (Karnataka Act 27 of 1975) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

**VAJUBHAI VALA**
**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ.ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ